# ಡಾ. ಸಿದ್ಧಯ್ಯ ಪುರಾಣಿಕ

(ಕಾವ್ಯಾನಂದ)



ಮಂಜುನಾಥ ಹೊನ್ನಾವರ

# ಡಾ. ಸಿದ್ಧಯ್ಯ ಪುರಾಣಿಕ

(ಕಾವ್ಯಾನಂದ)

ಮಂಜುನಾಥ ಹೊನ್ನಾವರ

ಮಾತೃ ಪ್ರಕಾಶನ
ನಂ, 120 (ಇ. ಡಬ್ಲ್ಯೂ. ಎಸ್)
ಎರಡನೆಯ ಹಂತ, ಕೆ.ಎಚ್.ಬಿ. ಕಾಲೋನಿ, ಬಸವೇಶ್ವರ ನಗರ,
ಬೆಂಗಳೂರು-79.

Dr. SIDDAIAH PURANIKA—a life-sketch written by Manjunatha Honnavara (H. B. Manjunatha) Published by Matru Prakashana, No. 120 (E. W. S) 2nd Stage, K. H. B. Colony, Basaveswara Nagar, Bangalore-79. pp. 52 Rs. 5-00.

ಪ್ರಥಮ ಮುದ್ರಣ : ಜನವರಿ 1987
ದ್ವಿತೀಯ ಮುದ್ರಣ : ಫೆಬ್ರವರಿ 1988

ಕೃತಿಯ ಹಕ್ಕು : ಲೇಖಕರದು

ಬೆಲೆ : ರೂ. 5-00

ಮುದ್ರಕರು :
ಲೋಟಸ್ ಪ್ರಿಂಟರ್ಸ್
೩೨/೨೫, ೨ನೇ ಮುಖ್ಯ ರಸ್ತೆ
ಕೈಗಾರಿಕಾನಗರ, ರಾಜಾಜಿನಗರ
ಬೆಂಗಳೂರು-೫೬೦ ೦೪೪

## ಮುನ್ನುಡಿ

ತರುಣ ಲೇಖಕ ಶ್ರೀ ಮಂಜುನಾಥ ಹೊನ್ನಾವರ ಅವರ ಈ ಅರುಣ ಕಿರಣಕ್ಕೆ ಎಲ್ಲ ಕನ್ನಡಿಗರ ಪರವಾಗಿ ನನ್ನ ಹಾರ್ದಿಕ ಸ್ವಾಗತ. ಅಂತೆಯೇ ಅವರ ಶುದ್ಧ ಪ್ರಬುದ್ಧ ಸಹೃದಯ ಚೇತನವು ವರ್ಧಿಷ್ಣುವಾಗಲಿ ಎಂಬ ಶುಭ ಹಾರೈಕೆ. ಶ್ರೀಯುತರು ಈಗಾಗಲೆ ಜ್ಞಾನಪೀಠ ಪ್ರಶಸ್ತಿ ವಿಜೇತ ಮಾಸ್ತಿಯವರನ್ನು ಕುರಿತು ಮಕ್ಕಳಿಗಾಗಿ ಒಂದು ಕೃತಿಯನ್ನು ರಚಿಸಿಕೊಟ್ಟಿದ್ದಾರೆ; ಓದುಗರ ಮನ್ನಣೆಗೆ ಪಾತ್ರರಾಗಿದ್ದಾರೆ. ಇದೀಗ ಸಿದ್ಧಯ್ಯ ಪುರಾಣಿಕರನ್ನು ಪುಟಾಣಿಗಳಿಗೆ ಪರಿಚಯಿಸುತ್ತಿದ್ದಾರೆ. ಅವರ ಬದುಕು-ಬರೆಹಗಳನ್ನು ಕುರಿತ ಸ್ಥೂಲ ಪರಿಚಯ ಇಲ್ಲಿದೆ.

'ವಚನೋದ್ಯಾನ'ದಂತಹ ಆಚಾರ್ಯ ಕೃತಿಯನ್ನಿತ್ತು ಕನ್ನಡಿಗರ ಕೀರ್ತಿಗೆ ಕೋಡು ಮೂಡಿಸಿದ ಹಿರಿಯ ಕವಿ ಸಿದ್ಧಯ್ಯ ಪುರಾಣಿಕರು ನಿಜಕ್ಕೂ ಗೌರವಾರ್ಹರು. ಐವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿರುವ ಈ ಶುಭ ಸಂದರ್ಭದಲ್ಲಿ ಈ ಮುಡಿಮನದ ನುಡಿ ಹಾರವನ್ನು ಅನನ್ಯ ಪ್ರೀತ್ಯಾದರಗಳಿಂದ ಅರ್ಪಿಸುತ್ತಿದ್ದಾರೆ ಗೆಳೆಯ ಮಂಜುನಾಥ. ಇದರ ಔಚಿತ್ಯಕ್ಕೆ, ಇದರ ಹಿನ್ನೆಲೆಯಲ್ಲಿರುವ ಅವ್ಯಾಜ್ಯ ಪ್ರೇಮಕ್ಕೆ, ಅಮೇಯವಾದ ಪ್ರಾಂಜಲ ಮನದ ಪಾರಿಶುದ್ಧ್ಯಕ್ಕೆ ನನ್ನ ಅನಂತ ನಮನಗಳು.

'ರಾಗಿಣಿ' ಡಾ|| ಸಾ. ಶಿ. ಮರುಳಯ್ಯ
ಬೆಂಗಳೂರು.
೧೯-೧-೧೯೮೭

## ಲೇಖಕನಿಂದ....

ಈ ಕೃತಿಗೆ ಹಲವು ವಿಷಯಗಳನ್ನು ತಿಳಿಸಿ ಆಶೀರ್ವದಿಸಿದ ಪೂಜ್ಯ ಡಾ. ಸಿದ್ಧಯ್ಯ ಪುರಾಣಿಕರಿಗೆ, ಪ್ರೀತಿಯಿಂದ ಮುನ್ನುಡಿ ಬರೆದ ಪೂಜ್ಯ ಡಾ. ಸಾ. ಶಿ. ಮರುಳಯ್ಯ ಅವರಿಗೆ ನನ್ನ ವಿನಮ್ರ ಪ್ರಣಾಮಗಳು. ಈ ಕೃತಿ ಬರೆಯುವುದಕ್ಕೆ ಪ್ರೇರಣೆ ನೀಡಿ ಸಹಕರಿಸಿದ ಸಹೃದಯ ಮಿತ್ರರಿಗೆ, ಅಲ್ಪಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ರಮ್ಯ ಉದ್ಯಮದ ಬಳಗದವರಿಗೆ ನನ್ನ ಅನಂತ ವಂದನೆಗಳು.

ಮೈಸೂರು
೨೬-೧-೮೭ ಮಂಜುನಾಥ ಹೊನ್ನಾವರ

### ದ್ವಿತೀಯ ಮುದ್ರಣ

ಈ ಕೃತಿಯನ್ನು ರಾಜ್ಯ ವಯಸ್ಕರ ಶಿಕ್ಷಣ ಇಲಾಖೆಯವರು ಆಯ್ಕೆ ಮಾಡಿಕೊಂಡ ಪ್ರಯುಕ್ತ ಎರಡನೆಯ ಮುದ್ರಣ ಕಾಣುತ್ತಿದೆ. ಅದಕ್ಕಾಗಿ ರಾಜ್ಯ ವಯಸ್ಕರ ಶಿಕ್ಷಣ ಇಲಾಖೆಯವರಿಗೆ ಮತ್ತು ಅಂದವಾಗಿ ಮುದ್ರಿಸಿ ಕೊಟ್ಟ ಲೋಟಸ್ ಪ್ರಿಂಟರ್ಸ್ ಅವರಿಗೆ ನನ್ನ ಅನಂತ ವಂದನೆಗಳು.

ಬೆಂಗಳೂರು ಮಂಜುನಾಥ ಹೊನ್ನಾವರ
೨೪-೨-೮೮

# ಡಾ. ಸಿದ್ಧಯ್ಯ ಪುರಾಣಿಕ

ಚಿಕ್ಕೇನಕೊಪ್ಪದ ದೊಡ್ಡ ಜಮೀನುದಾರರೊಬ್ಬರು ಒಮ್ಮೆ ಹೊಲ ಉಳುಮೆ ಮಾಡಲು ಟ್ರಾಕ್ಟರೊಂದನ್ನು ತರಿಸಿದ್ದರು. ಸುತ್ತ ಮುತ್ತಲಿನ ಹಳ್ಳಿಗೆ ಈ ಆನೆಯಂತಹ ಯಂತ್ರ ಬಂದಿದ್ದು ಮೊದಲ ಬಾರಿಗೆ. ಅಲ್ಲಿನ ಜನರು ಅದನ್ನು ಬಿಟ್ಟಕಣ್ಣು ಬಿಟ್ಟಹಾಗೆ ನೋಡುತ್ತಿದ್ದರು. ಆ ದೊಡ್ಡಯಂತ್ರ ತನ್ನ ರಕ್ಕಸ ಹಲ್ಲುಗಳಿಂದ ದೊಡ್ಡ ಹೆಂಟೆಗಳನ್ನು ಎಬ್ಬಿಸುತ್ತಾ, ಕಟ ಕಟ ಕರ್ಕಶ ಶಬ್ದ ಮಾಡುತ್ತಾ, ಕೈಗೆ ಸಿಕ್ಕ ಗಿಡಗಳನ್ನು ಕತ್ತರಿಸುತ್ತಾ, ತಳ ಕವರಿ ಮೇಲೆ ಹಾಕುತ್ತಾ ಎಲ್ಲವನ್ನು ನುಂಗುವಂತೆ ಮುಂದೆ ಮುಂದೆ ಹೋಗುತ್ತಿತ್ತು. ಈ ದೊಡ್ಡ ಯಂತ್ರವನ್ನು ನೋಡುತ್ತಿದ್ದ ಜನರ ಗುಂಪಿನಲ್ಲಿ ಒಬ್ಬ ಹುಡುಗನಂತೂ ತುಂಬಾ ಕುತೂಹಲದಿಂದ ಬೆರಗಾಗಿ ನೋಡುತ್ತಿದ್ದ. ಆತನಿಗೆ ಇದೊಂದು ಆಶ್ಚರ್ಯದ ಯಂತ್ರವಾಗಿ ಆಕಾಶದಿಂದ ಇಳಿದು ಬಂದಿರುವಂತೆ ಕಾಣುತ್ತಿತ್ತು. ಆ ರಾಕ್ಷಸ ಆಕಾರದ ಯಂತ್ರವನ್ನು ನಡೆಸುತ್ತಿದ್ದ ಚಾಲಕನಂತೂ ಆ ಹುಡುಗನಿಗೆ ಒಬ್ಬ ಮಾಂತ್ರಿಕನಂತೆ ಅದ್ಭುತ ವ್ಯಕ್ತಿಯಾಗಿ ಕಂಡಿದ್ದ. ಆತ ಆ ಯಂತ್ರವನ್ನು ನಡೆಸುತ್ತಿದ್ದ ರೀತಿ, ಸ್ಟೇರಿಂಗ್ ತಿರುಗಿಸುವ

ಚಾಕಚಕ್ಯತೆ, ನೇರವಾಗಿ ಓಡಿಸುವುದು, ಏನಾದರೂ ಮಧ್ಯೆ ಇಂಜಿನ್ ಕೆಟ್ಟರೆ ತಕ್ಷಣ ತಾನೇ ರಿಪೇರಿ ಮಾಡುವುದು, ಇವೆಲ್ಲಕ್ಕಿಂತ ಮಿಗಿಲಾಗಿ ಅಂಜಿಕೆಯಿಲ್ಲದೆ ಓಡಿಸುವುದು ಆ ಹುಡುಗನಿಗೆ ಆಶ್ಚರ್ಯ ಉಂಟುಮಾಡಿತ್ತು.

ಟ್ರಾಕ್ಟರ್ ನೋಡುತ್ತಿದ್ದ ಹುಡುಗನಿಗೆ ಇದ್ದಕ್ಕಿದ್ದಂತೆ ಒಂದು ಯೋಚನೆ ಹೊಳೆಯಿತು. "ನಾನು ಮುಂದೆ ದೊಡ್ಡ ವನಾಗಿ ಕೆಲಸಕ್ಕೆ ಸೇರಿದರೆ ಇಂತಹ ಯಂತ್ರಗಳ ಚಾಲಕನೇ ಆಗಬೇಕು" ಎಂಬ ಬಯಕೆ ಹುಟ್ಟಿತು. ಆದರೆ ಆ ಹುಡುಗ ಮುಂದೆ ಕೇವಲ ಟ್ರಾಕ್ಟರ್ ನಡೆಸುವ ಚಾಲಕನಾಗದೆ, ಆಡಳಿತವೆಂಬ ಬೃಹತ್ ಯಂತ್ರವನ್ನೇ ನಡೆಸುವ ಚಾಲಕ ನಾದ. ಆ ಹುಡುಗ ಯಾರು ಗೊತ್ತೆ?....ಅವರೇ ಇಂದಿನ ಪ್ರಸಿದ್ಧ ಕವಿಗಳಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರು.

ಪುರಾಣಿಕರಿಗೆ ಎಲ್ಲರಂತೆ ಚಿಕ್ಕವಯಸ್ಸಿನಲ್ಲಿಯೇ ಹೆಚ್ಚು ಓದಬೇಕು, ತಂದೆ ತಾಯಿಗಳನ್ನು ಚೆನ್ನಾಗಿ ನೋಡಿ ಕೊಳ್ಳಬೇಕು ಎಂಬ ಆಸೆ ಇತ್ತು. ಅವರು ಓದುತ್ತಿದ್ದ ಶಾಲೆ ಯಲ್ಲಿ ಒಮ್ಮೆ ಗುರುಗಳು ಪಾಠ ಮಾಡಿದ ಮೇಲೆ ಮಕ್ಕಳಿಗೆ ಒಂದು ಪ್ರಶ್ನೆ ಹಾಕಿದರು. "ಮಕ್ಕಳೇ, ನಿಮಗೆ ಏನು ಬೇಕು? ಯಾವುದರ ಬಗ್ಗೆ ಹೆಚ್ಚು ಆಸೆ? ಎಂಬುದನ್ನು ಸ್ಲೇಟಿನ ಮೇಲೆ ಬರೆದುಕೊಂಡು ತನ್ನಿ" ಎಂದರು. ಒಬ್ಬೊಬ್ಬರು ಒಂದೊಂದು ರೀತಿ ತಮಗೆ ಇಷ್ಟವಾದ ವಸ್ತುಗಳನ್ನು ಬರೆದು ಕೊಂಡು ಬಂದರು. ಕೆಲವರು ಚೆಂಡು ಬೇಕೆಂದು, ಇನ್ನು



ಕೆಲವರು ಅಂಗಿ ಬೇಕೆಂದು ಬರೆದಿದ್ದರೆ ಪುರಾಣಿಕರು "ನನಗೆ ವಿದ್ಯೆ ಬೇಕು" ಎಂಬುದಾಗಿ ಬರೆದಿದ್ದರು. ಅದರಂತೆ ಕಷ್ಟ ಪಟ್ಟು ಓದಿ ಪ್ರತಿಯೊಂದು ಪರೀಕ್ಷೆಯಲ್ಲೂ ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾಗಿ ಉನ್ನತ ಅಧಿಕಾರಿಯಾದರು.

## ಜನನ

ರಾಯಚೂರು ಜಿಲ್ಲೆ ಯಲಬುರ್ಗಿ ತಾಲ್ಲೂಕಿಗೆ ಸೇರಿದ ದ್ಯಾಂಪುರ ಎಂಬುದೊಂದು ಚಿಕ್ಕ ಹಳ್ಳಿಯಲ್ಲಿ ಸಿದ್ಧಯ್ಯ ಪುರಾಣಿಕರು ದಿನಾಂಕ ೧೮-೬-೧೯೧೮ ರಂದು ಜನಿಸಿದರು. ತಂದೆ ಕಲ್ಲಿನಾಥ ಶಾಸ್ತ್ರಿಗಳು. ತಾಯಿ ದಾನಮ್ಮನವರು. ಇವರ ತಾತ ಕವಿರತ್ನ ಚೆನ್ನ ಕವಿಗಳು. ಪುರಾಣಿಕ ಎಂಬುದು ಇವರ ಮನೆತನದ ಹೆಸರು. ಇವರ ಪೂರ್ವಜರು ಆಗರ್ಭ ಶ್ರೀಮಂತರಲ್ಲದಿದ್ದರೂ ಒಳ್ಳೆಯ ಸುಸಂಸ್ಕೃತರು ಸಾತ್ವಿಕರು, ಜ್ಞಾನಿಗಳು.

ಕಲ್ಲಿನಾಥ ಶಾಸ್ತ್ರಿಗಳು ಆ ಊರಿಗೆ ಜೀವನಾಡಿಯಂತಿ ದ್ದರು. ಪುರಾಣ ಪ್ರವಚನ ಮಾಡುವುದರಿಂದ ಹಿಡಿದು ನಾಟಕ, ಕವಿತೆ ಬರೆಯುವವರೆಗೆ, ನ್ಯಾಯ ತೀರ್ಮಾನ ಮಾಡುವುದರಿಂದ ಹಿಡಿದು ಜನರಿಗೆ ಕಾಯಿಲೆ ಬಂದಾಗ ಔಷಧಿ ಕೊಡುವವರೆಗೆ—ಅವರಿಗೆ ತಿಳಿಯದ ವಿದ್ಯೆಯೇ ಇರಲಿಲ್ಲ.



ಶ್ರೀ ಕಲ್ಲಿನಾಥ ಶಾಸ್ತ್ರಿಗಳು



ಶ್ರೀಮತಿ ದಾನಮ್ಮನವರು

ದಾನಮ್ಮನವರು ಪತಿಗೆ ತಕ್ಕಂತಹ ಸತಿ. ಹೆಸರಿಗೆ ತಕ್ಕಂತೆ ದಾನಮ್ಮನೇ ಆಗಿದ್ದರು. ಅವರ ಮನೆಗೆ ಬಂದವರು ಯಾರೂ ಬರಿಹೊಟ್ಟೆಯಲ್ಲಿ ಮರಳಿ ಹೋಗುವಂತಿಲ್ಲ. ಇಂತಹ ಸುಸಂಸ್ಕೃತ ಪರಿಸರದಲ್ಲಿ ಪುರಾಣಿಕರು ಬೆಳೆದರು.

## ವಿದ್ಯಾಭ್ಯಾಸ

ದ್ಯಾಂಪುರದಲ್ಲಿ ಹೆಚ್ಚು ಜನ ಬಡವರಿದ್ದರು. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗುರುಗಳಿಗೆ ಹೆಚ್ಚು ಹಣ ಕೊಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದ ಗುರುಗಳು ಸಹ ಒಂದು ದಿನ ಬಂದರೆ ಎರಡು ದಿನ ಬರು



ತ್ತಿರಲಿಲ್ಲ. ಒಮ್ಮೆ ದ್ಯಾಂಪುರದಲ್ಲಿ ಒಂದು ಕೊಲೆ ಘಟನೆ ನಡೆಯಿತು. ಇದರಿಂದ ನೆಮ್ಮದಿಯಿಂದ ಇದ್ದ ಊರಿಗೆ ಸಿಡಿಲು ಹೊಡೆದಂತೆ ಆಯಿತು. ಮೊದಲೇ ಕುಂಟುತ್ತಾ ನಡೆದಿದ್ದ ಶಾಲೆ ಮಲಗಿಬಿಟ್ಟಿತು.

ಕಲ್ಲಿನಾಥ ಶಾಸ್ತ್ರಿಗಳಿಗೆ ಮಗನನ್ನು ಒಳ್ಳೆಯ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಆಸೆ. ಅದಕ್ಕೆ ಕೊಡಲಿ ಪೆಟ್ಟು ಬಿದ್ದರೂ ಯಾವುದೇ ಕಾರಣದಿಂದ ಸಿದ್ಧಯ್ಯನ ವಿದ್ಯಾಭ್ಯಾಸ ನಿಲ್ಲಕೂಡದೆಂದು ಯೋಚಿಸಿ ಪಕ್ಕದ ಹಳ್ಳಿಯಾದ ಚಿಕ್ಕೇನಕೊಪ್ಪ ಶಾಲೆಗೆ ಸೇರಿಸಿದರು. ಅಲ್ಲಿ ಪುರಾಣಿಕರ ಸೋದರ ಮಾವನವರೇ ಗುರುಗಳಾದ್ದರಿಂದ ಯಾವುದಕ್ಕೂ ತೊಂದರೆಯಾಗಲಿಲ್ಲ. ಪಾಠಗಳು ಚೆನ್ನಾಗಿ ನಡೆಯುತ್ತಿದ್ದವು. ಊಟವು ಚೆನ್ನಾಗಿ ಬೀಳುತ್ತಿತ್ತು. ಇದ್ದಕ್ಕಿದ್ದಂತೆ ಮತ್ತೆ ಆ ಊರಿನಲ್ಲಿಯೂ ಸಹ ಒಂದು ಕೊಲೆಯಾಯಿತು. ಸೋದರ ಮಾವನವರು ಹುಡುಗನನ್ನು ಕರೆದುಕೊಂಡು ದ್ಯಾಂಪುರಕ್ಕೆ ಓಡಿ ಬಂದಾಗ ಮತ್ತೆ ಕಲ್ಲಿನಾಥ ಶಾಸ್ತ್ರಿಗಳಿಗೆ ಯೋಚನೆ ಹತ್ತಿತು. ಇದರ ಮಧ್ಯೆ ಶಾಸ್ತ್ರಿಗಳಿಗೆ ಮತ್ತೊಂದು ವಿಪತ್ತು ಅಪ್ಪಳಿಸಿತು. ಇವರ ದೊಡ್ಡ ಕುಟುಂಬ ಎರಡು ಭಾಗವಾಯಿತು. ವ್ಯವಸಾಯದ ಬಗ್ಗೆ ಶಾಸ್ತ್ರಿಗಳಿಗೆ ಅನುಭವವಿಲ್ಲದೆ ಇದ್ದುದರಿಂದ ವ್ಯವಸಾಯದಲ್ಲಿ ತುಂಬಾ ನಷ್ಟವುಂಟಾಯಿತು. ಈ ಕಡೆ ಮಗನ ವಿದ್ಯಾಭ್ಯಾಸದ ಚಿಂತೆ, ಆ ಕಡೆ ಬದುಕಿನ ಚಿಂತೆ ಮುಂತಾದ ಯೋಚನೆಗಳು ಕಲ್ಲಿನಾಥ ಶಾಸ್ತ್ರಿ

ಗಳನ್ನು ತಿನ್ನತೊಡಗಿದವು. ಇದರ ಮೇಲೆ ಇವರ ಊರು ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು. ಬೇರೆ ರಾಜ್ಯದ ಪದವಿ ಪಡೆದರೆ ನೌಕರಿ ಸಿಕ್ಕುತ್ತಿರಲಿಲ್ಲ. ಆದ್ದರಿಂದ ನಿಜಾಮರ ರಾಜ್ಯದಲ್ಲೇ ಓದಬೇಕಾಗಿ ಬಂದುದರಿಂದ ಸಿದ್ಧಯ್ಯನವರಿಗೆ ಕಲ್ಲಿನಾಥ ಶಾಸ್ತ್ರಿಗಳು ಮನೆಯಲ್ಲೇ ಉರ್ದು ಕಲಿಸತೊಡಗಿದರು.

ಕಲ್ಲಿನಾಥ ಶಾಸ್ತ್ರಿಗಳು ಕೇವಲ ನಾಲ್ಕನೆಯ ತರಗತಿಯವರಿಗೆ ಮಾತ್ರ ಓದಿದ್ದರೂ ನೀರು ಕುಡಿದಂತೆ ಕವನಗಳನ್ನು ರಚಿಸುತ್ತಿದ್ದರು. ನಾಟಕಗಳನ್ನು ಬರೆದು ಊರುಗಳಲ್ಲಿ ಆಡಿಸುತ್ತಿದ್ದರು. ಪುರಾಣ ಪ್ರವಚನ ಮಾಡುತ್ತಿದ್ದರು. ಇದರಿಂದ ಅವರ ಜೀವನಕ್ಕೇನು ತೊಂದರೆ ಬರಲಿಲ್ಲ. ಇವರ "ಅನ್ನದಾನ ಮಹತ್ವ" ಎಂಬ ನಾಟಕ ಜನರ ಅಪಾರ ಮೆಚ್ಚಿಗೆ ಗಳಿಸಿತು. ತಂದೆಯ ಬಹುಮುಖ ಪ್ರತಿಭೆ ಕಂಡಿದ್ದ ಪುರಾಣಿಕರಿಗೆ "ನಾನು ತಂದೆಗೆ ತಕ್ಕ ಮಗನಾಗಬಲ್ಲೆನೆ" ಎಂಬ ಯೋಚನೆ ಸದಾ ಕಾಡುತ್ತಿತ್ತು.

## ಕುಕ್ಕನೂರಿನ ವಿದ್ಯಾನಂದ ಗುರುಕುಲದಲ್ಲಿ

ಅನಂತರ ಪುರಾಣಿಕರು ಕುಕ್ಕನೂರಿನ ವಿದ್ಯಾನಂದ ಗುರುಕುಲಕ್ಕೆ ಐದನೆಯ ತರಗತಿಗೆ ಸೇರಿಕೊಂಡರು. ಆ ಶಾಲೆಗೆ ಶುಲ್ಕ ಕೊಡಲಾರದಷ್ಟು ಬಡತನವಿದ್ದರೂ ಕಲ್ಲಿನಾಥ ಶಾಸ್ತ್ರಿಗಳು ಎದೆಗುಂದಲಿಲ್ಲ. ಆ ಗುರುಕುಲದ ಕೆಲವು ಗುರುಗಳಲ್ಲಿ ಜಾತಿ ಪಕ್ಷಪಾತವಿದ್ದುದರಿಂದ ಬೇಸತ್ತ ಸಿದ್ಧಯ್ಯನವರು ಶಾಲೆಗೆ ಚಕ್ಕರ್ ಹೊಡೆಯಲು ಪ್ರಾರಂಭಿಸಿದರು. ಬೆಳಗ್ಗೆ ಶಾಲೆಗೆ ಹೋಗುತ್ತೇನೆಂದು ಹೇಳಿ ಅಲ್ಲಿ ಇಲ್ಲಿ ತಿರುಗುತ್ತ ಕಾರೆ-ಬೋರೆ ಹಣ್ಣು ತಿಂದುಕೊಂಡು ಸಂಜೆ ಶಾಲೆ ಬಿಡುವ ವೇಳೆಗೆ ಸರಿಯಾಗಿ ಮನೆಗೆ ಹೋಗುತ್ತಿದ್ದರು. ಹೀಗೆ ಮೂರು ತಿಂಗಳು ಕಳೆಯಿತು. ಶಾಲೆಯಲ್ಲಿ ಹೆಸರೂ ವಜಾ ಆಯಿತು. ಒಮ್ಮೆ ಕಲ್ಲಿನಾಥ ಶಾಸ್ತ್ರಿಗಳು ಮಗನ ವಿದ್ಯಾಭ್ಯಾಸ ತಿಳಿಯಲು ಶಾಲೆಗೆ ಹೋದರು. ವಿಚಾರ ತಿಳಿದು ಅವರಿಗೆ ರಕ್ತವೆಲ್ಲಾ ಕುದಿಯಿತು. ಸಿದ್ಧಯ್ಯನವರಿಗೆ ಹೊಡೆಯಲು ಕೈಯೆತ್ತಿದಾಗ ಸಿದ್ಧಯ್ಯನವರು ಗುರುಗಳ ಮುಂದೆಯೇ ತಮ್ಮ ಜಾತಿಯ ಬಗ್ಗೆ ಹೀಯಾಳಿಸುವುದನ್ನು ಧೈರ್ಯವಾಗಿ ಹೇಳಿದರು. ಈ ವಿಚಾರ ಅಲ್ಲಿನ ಮುಖ್ಯೋಪಾಧ್ಯಾಯರಾದ ದೇಸಾಯಿ ಪಾಂಡುರಂಗರಾಯರ ಗಮನಕ್ಕೆ ಬಂದಿರಲಿಲ್ಲ. ಅವರು ವಿಚಾರ ತಿಳಿದು ತುಂಬಾ ದುಃಖಪಟ್ಟು ಸಿದ್ಧಯ್ಯನವರನ್ನು ಮತ್ತೆ ಶಾಲೆಗೆ ಸೇರಿಸಿಕೊಂಡರು. ಶುಲ್ಕ ವಜಾ ಮಾಡಿದರು. ವಾಚನಾಲಯದಿಂದ ಓದಲು ಸಾಕಷ್ಟು ಪುಸ್ತಕಗಳನ್ನು ಒದಗಿಸಿಕೊಟ್ಟರು. ಹೀಗೆ ಬರು ಬರುತ್ತಾ ಸಿದ್ಧಯ್ಯನವರು ಇಡೀ ಶಾಲೆಗೆ ಎದ್ದು ಕಾಣುವ ವಿದ್ಯಾರ್ಥಿಯಾದರು. ಪ್ರಬಂಧ ಸ್ಪರ್ಧೆ, ಆಶುಭಾಷಣ ಸ್ಪರ್ಧೆ ಮುಂತಾದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನ ಪಡೆದರು.

## ಮಹಾವ್ಯಕ್ತಿಗಳ ಪ್ರಭಾವ :

ವಿದ್ಯಾನಂದ ಗುರುಕುಲದಲ್ಲಿ ಗಾಂಧೀಜಿಯ ಆದರ್ಶಗಳನ್ನು ಆಚರಣೆಗೆ ತಂದಿದ್ದರು. ಆ ಆಚರಣೆಗಳು ಸಿದ್ಧಯ್ಯನವರ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಹಾಗೆಯೇ ಬಸವಣ್ಣನವರು, ಹರ್ಡೇಕರ್ ಮಂಜಪ್ಪನವರು ಮುಂತಾದ ಮಹಾವ್ಯಕ್ತಿಗಳ ನಡೆನುಡಿಗಳು ಸಿದ್ಧಯ್ಯನವರನ್ನು ತಿದ್ದಿದವು. ದೇಶಾಭಿಮಾನ ಮತ್ತು ಧರ್ಮದ ಬಗ್ಗೆ ಹೆಚ್ಚಿನ ವಿಚಾರಗಳನ್ನು ತಿಳಿದರು. ಏಳನೆಯ ತರಗತಿ ಮುಗಿಯುವ ಹೊತ್ತಿಗೆ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ಅಭ್ಯಾಸ ಮಾಡಿದ್ದರು. ಚಿಕ್ಕವಯಸ್ಸಿನಲ್ಲೇ ತಂದೆ ಕಲಿಸಿದ ಅಮರಕೋಶ, ಕರ್ನಾಟಕ ಶಬ್ದಮಂಜರಿ ಎಲ್ಲಾ ರಕ್ತಗತವಾಗಿ ವಯಸ್ಸಿಗೆ ಮೀರಿದ ಜ್ಞಾನ ಸಂಪಾದನೆ ಮಾಡಿದ್ದರು.

ಏಳನೆಯ ತರಗತಿಯನ್ನು ಪ್ರಥಮ ಸ್ಥಾನದಲ್ಲಿ ಪಾಸು ಮಾಡಿದ ಪುರಾಣಿಕರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಏನು ಮಾಡುವುದು ಎಂಬ ಯೋಚನೆ ಹತ್ತಿತು. ಅವ್ವ ಹಿಂದಿನಿಂದ ಒಂದಾಣೆ ಎರಡಾಣೆ ಕೂಡಿಟ್ಟಿದ್ದ ಹುಂಡಿಯನ್ನು ತಂದು ಅಪ್ಪನ ಮುಂದೆ ಇಟ್ಟಾಗ ಅಪ್ಪನ ಮುಖ ಅರಳಿತು. ಹೆಚ್ಚು ಅಂಕ ಪಡೆದಿದ್ದುದರಿಂದ ಪುರಾಣಿಕರಿಗೆ ನಿರಾಯಾಸವಾಗಿ ಕಲ್ಬುರ್ಗಿ ಸರಕಾರಿ ಹೈಸ್ಕೂಲಿನಲ್ಲಿ ಪ್ರವೇಶ ದೊರೆಯಿತು.



## ಕಲ್ಬುರ್ಗಿಯಲ್ಲಿ

ಹೈಸ್ಕೂಲಿನಲ್ಲಿ ಅವರ ಬಯಕೆಯಂತೆ ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಓದತೊಡಗಿದರು. ಪ್ರತಿನಿತ್ಯ ಗುರುಗಳು ಕೊಟ್ಟ ಮನೆ ಕೆಲಸವನ್ನು ಅಂದೇ ಮುಗಿಸುತ್ತಿದ್ದರು. ಒಂದು ದಿನ ಮನೆ ಕೆಲಸ ಮಾಡದೆ ಹಾಗೆಯೇ ತರಗತಿಗೆ ಹೋದರು. ಗುರುಗಳು ಕೋಪದಿಂದ "ನೀನು ನನ್ನ ಶಿಷ್ಯನಾಗಲು ಅರ್ಹನಲ್ಲ. ಬೇರೆ ವಿಷಯ ಆರಿಸಿಕೋ" ಎಂಬುದಾಗಿ ಎಲ್ಲಾ ಹುಡುಗರ ಮುಂದೆ ರೇಗಿದರು. ಎಂದೂ ತಪ್ಪು ಮಾಡದ ಸಿದ್ಧಯ್ಯನವರಿಗೆ ತುಂಬಾ ನೋವಾಯಿತು. ತತ್‌ಕ್ಷಣವೇ "ನನಗೂ ನಿಮ್ಮ ಶಿಷ್ಯನಾಗಿ ಮುಂದುವರಿಯಲು ಇಷ್ಟವಿಲ್ಲ"ವೆಂದು ಹೇಳಿ ತರಗತಿಯಿಂದ ಹೊರಬಂದರು. ಅನಂತರ ಕನ್ನಡ ಐಚ್ಛಿಕ ವಿಷಯವನ್ನು ಆರಿಸಿಕೊಂಡು ಓದತೊಡಗಿದರು. ಈ ಘಟನೆ ಪುರಾಣಿಕರ ದಿಕ್ಕನ್ನೇ ಬದಲಾಯಿಸಿತು.

ಹೈಸ್ಕೂಲಿನಲ್ಲಿ ಕನ್ನಡ ಗುರುಗಳಾಗಿದ್ದ ಶ್ರೀ ತವಗ ಭೀಮಸೇನರಾಯರು ದೊಡ್ಡ ವಿದ್ವಾಂಸರು. ಕನ್ನಡನಾಡಿನ ಏಳಿಗೆಗಾಗಿ ಸದಾ ದುಡಿಯುತ್ತಿದ್ದವರು. ಇಂತಹವರ ಸಂಪರ್ಕದಿಂದ ಪುರಾಣಿಕರಿಗೆ ಕನ್ನಡದಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಹುಟ್ಟಿತು.

ಒಮ್ಮೆ ಕಲ್ಬುರ್ಗಿ ಕರ್ನಾಟಕ ಸಂಘದ ಆಶ್ರಯದಲ್ಲಿ

ಕವನ ಸ್ಪರ್ಧೆ ನಡೆದಾಗ "ಬೆಳಗು" ಎಂಬ ಮೊದಲ ಕವಿತೆಯನ್ನು ಬರೆದು ಕಳುಹಿಸಿದರು. ಈ ಕವನಕ್ಕೆ ಪ್ರಥಮ ಪಾರಿತೋಷಿಕ ದೊರೆತಾಗ ಪುರಾಣಿಕರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಬೆಳಕು ಹರಿಯುವುದರೊಳಗೆ ಇಡೀ ಕಲ್ಬುರ್ಗಿಯಲ್ಲಿ ಪುರಾಣಿಕರು ಕವಿಯಾಗಿಬಿಟ್ಟಿದ್ದರು.

ಅಂದಿನಿಂದ ಕವನ ಬರೆಯುವುದನ್ನು ಚೆನ್ನಾಗಿ ರೂಢಿಸಿಕೊಂಡ ಪುರಾಣಿಕರು ಕವನಗಳ ಜೊತೆ ನಾಟಕಗಳನ್ನು ಬರೆದು ಅದರಲ್ಲಿ ಪಾತ್ರವನ್ನು ವಹಿಸತೊಡಗಿದರು. ಅನೇಕ ಕನ್ನಡ ಸಂಘ ಸಂಸ್ಥೆಗಳಲ್ಲಿ ದುಡಿಯುವುದರ ಜೊತೆಗೆ ಪ್ರತಿವರ್ಷವೂ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದರು. ನಿರೀಕ್ಷೆಯಂತೆ ಮೆಟ್ರಿಕ್ ಪರೀಕ್ಷೆಯಲ್ಲೂ ಸಹ ಪ್ರಥಮ ಸ್ಥಾನ ಪಡೆದರು. ಇದರಿಂದ ಎರಡು ವರ್ಷಗಳ ಕಾಲೇಜು ಶಿಕ್ಷಣಕ್ಕೆ ವಿದ್ಯಾರ್ಥಿವೇತನ ದೊರೆಯುವುದಕ್ಕೆ ಅವಕಾಶವಾಯಿತು. ತಂದೆ ತಾಯಿಗಳಿಗೆ, ತಂಗಿ ವೀರಾಂಬೆಗೆ, ತಮ್ಮ ಅನ್ನದಾನಿಗೆ ತುಂಬಾ ಸಂತೋಷವಾಯಿತು.

ಇದೇ ಸಮಯಕ್ಕೆ ಸರಿಯಾಗಿ ಉದಗಿರಿಯ ಹಾವಗಿ ಸ್ವಾಮಿ ಮಠಕ್ಕೆ ಸ್ವಾಮಿಯಾಗಲು ಪುರಾಣಿಕರಿಗೆ ಕರೆ ಬಂದಿತು. ಈ ವಿಚಾರದಲ್ಲಿ ತಂದೆಯವರು "ನೀನೀಗ ಸಣ್ಣವನಲ್ಲ, ಇದಕ್ಕೆ ನೀನೇ ತೀರ್ಮಾನ ತೆಗೆದುಕೋ. ನೀನು ಏನೇ ನಿರ್ಣಯ ತೆಗೆದುಕೊಂಡರೂ ನನಗೆ ಸಂತೋಷ" ಎಂದರು. ಕೆಲವು ಸ್ವಾಮಿಗಳ ಅವ್ಯವಹಾರ ಕಂಡಿದ್ದ,



ಕೇಳಿದ್ದ ಪುರಾಣಿಕರು ಆ ಕರೆಯನ್ನು ತಿರಸ್ಕರಿಸಿದರು. ಅಂದು ಪುರಾಣಿಕರು ಕೇವಲ ಒಂದು ಮಠದ ಸ್ವಾಮಿಯಾಗಲು ಒಪ್ಪಿದರೆ, ಇಂದು ನಮ್ಮ ಇಡೀ ರಾಜ್ಯಕ್ಕೆ ಅಧಿಕಾರಿಯಾಗಿ ಜನಸೇವೆ ಮಾಡುವ ಸುಯೋಗ ಅವರಿಗೆ ಲಭಿಸುತ್ತಿರಲಿಲ್ಲ.

ತಂದೆಯವರ ಕಷ್ಟವನ್ನು ನೋಡುತ್ತಿದ್ದ ಪುರಾಣಿಕರು ಆದಷ್ಟು ಬೇಗ ಕೆಲಸಕ್ಕೆ ಸೇರಿ ಮನೆಯ ಬಡತನವನ್ನು ಹೋಗಲಾಡಿಸಬೇಕೆಂದು ನಿಶ್ಚಯಿಸಿದರು. ಅದರಂತೆ ಸರಕಾರಿ ವಿದ್ಯಾರ್ಥಿ ನಿಲಯದಲ್ಲೇ ಇದ್ದುಕೊಂಡು ಇಂಟರ್‌ಮೀಡಿಯಟ್‌ನ್ನು ಓದತೊಡಗಿದರು. ಈ ಪರೀಕ್ಷೆಯಲ್ಲಿಯೂ ಪ್ರಥಮ ಸ್ಥಾನ ಗಿಟ್ಟಿಸಬೇಕೆಂಬ ಛಲ ಪುರಾಣಿಕರಿಗೆ ಹುಟ್ಟಿತು. ಇದಕ್ಕೆ ಗುರುಗಳ ಪ್ರೋತ್ಸಾಹ ಹಾಗೂ ಸಹಕಾರ ದೊರಕಿತು. ಹಗಲು ರಾತ್ರಿ ಕಷ್ಟಪಟ್ಟು ಓದತೊಡಗಿದರು. ಅದೇ ವರ್ಷ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ಬೇರೆ ಅವಿರೋಧವಾಗಿ ಆಯ್ಕೆಯಾದರು. ಕನ್ನಡದ ಕಾರ್ಯಕ್ರಮಗಳನ್ನು ಹೆಚ್ಚು ಹಮ್ಮಿಕೊಂಡರು.

ಪುರಾಣಿಕರು ಇಂಟರ್ ಮೀಡಿಯಟ್ ಓದುತ್ತಿದ್ದಾಗ ಅವರ ಜೀವನದಲ್ಲಿಯೇ ಮರೆಯಲಾಗದ ಘಟನೆಯೊಂದು ನಡೆಯಿತು. ಒಮ್ಮೆ ಹರವಾಳ ಎಂಬ ಗ್ರಾಮಕ್ಕೆ ಮಿತ್ರರೊಬ್ಬರ ಮದುವೆಗೆ ಹೋಗಿದ್ದರು. ಅಲ್ಲಿನ ಭೀಮಾನದಿ

ಯಲ್ಲಿ ಈಜಾಡುವುದಕ್ಕೆ ಹೋದರು. ಯೌವ್ವನದ ಹುಮ್ಮಿ ನಿಂದ ನದಿಯ ಮಧ್ಯಕ್ಕೆ ಈಜುತ್ತಾ ಹೊರಟೇ ಹೋದರು. ಮುಂದಕ್ಕೆ ಮುಂದಕ್ಕೆ ಹೋಗಿ ಕೊನೆಗೆ ಒಂದು ನೀರಿನ ಸೆಳವಿಗೆ ಸಿಕ್ಕಿ ಬಿಟ್ಟರು. ಜೊತೆಯಲ್ಲಿ ಬಂದಿದ್ದ ಸ್ನೇಹಿತರೆಲ್ಲಾ ದಡದಲ್ಲೇ ಈಜಾಡಿ ಹೋಳಿಗೆ ಊಟ ಮಾಡಲು ಮದುವೆ ಮನೆಗೆ ಹೋಗಿಬಿಟ್ಟಿದ್ದಾರೆ. ಕೈಗಳು ಸೋತಿವೆ. ಹಸಿವು ಹೆಚ್ಚಾಗಿದೆ. ಧೈರ್ಯ ಕುಸಿಯುತ್ತಿದೆ. ಹಿಂದಕ್ಕೆ ಬರಲು ಸಾಧ್ಯವಾಗದೆ ದೇವರ ಧ್ಯಾನ ಮಾಡುತ್ತಾ ಕಣ್ಣು ಮುಚ್ಚಿ ದರು. ಕೊಚ್ಚಿ ಹೋಗುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಬಡಿದು ಎಬ್ಬಿಸಿದ ಅನುಭವವಾಯಿತು. ಕಣ್ಣುಬಿಟ್ಟು ನೋಡುತ್ತಾರೆ, ದಂಡೆಯ ಪಕ್ಕದಲ್ಲಿ ಬೆಳೆದಿದ್ದ ಕಂಟಿ ಯೊಂದಕ್ಕೆ ಶಿವದಾರ ಸಿಕ್ಕಿಕೊಂಡಿದ್ದರಿಂದ ಜೀವ ಉಳಿದಿತ್ತು. ಪುರಾಣಿಕರು ಇಂದು ಸಹ ಆ ದೃಶ್ಯವನ್ನು ಜ್ಞಾಪಿಸಿ ಕೊಂಡಾಗ ನಡುಗುತ್ತಾರೆ.

ಪುರಾಣಿಕರು ಪ್ರಾರಂಭದಿಂದಲು ಖಾದಿವಸ್ತ್ರವನ್ನೇ ಧರಿಸುತ್ತಿದ್ದರು. ಕಾಲೇಜು ಕಾರ್ಯದರ್ಶಿಯಾಗಿದ್ದರೂ ಖಾದಿವಸ್ತ್ರ ಬಿಟ್ಟರಲಿಲ್ಲ. ಆದರೆ ಅದನ್ನು ಹೆಚ್ಚು ದಿನ ಉಳಿಸಿ ಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಸ್ನೇಹಿತರ ಒತ್ತಾಯದ ಮೇರೆಗೆ ವಿದ್ಯಾರ್ಥಿವೇತನ ಹಣದಿಂದ ಎರಡು ರೇಷ್ಮೆ ಬಟ್ಟೆ ಗಳನ್ನು ಹೊಲಿಸಿದ್ದರಿಂದ ಖಾದಿವ್ರತ ಮುರಿದು ಬಿದ್ದಿತು. ಈ ಒಂದು ವಿಚಾರದಲ್ಲಿ ಅವರ ಸಂಯಮ ಬಲ ಉಳಿಯ ಲಿಲ್ಲ.



ಪರೀಕ್ಷೆ ಹತ್ತಿರ ಬರುತ್ತಿದ್ದಂತೆ ದೇಹದ ದಣಿವನ್ನು ಲೆಕ್ಕಿಸದೆ ಪುರಾಣಿಕರು ಓದತೊಡಗಿದರು. ದುರದೃಷ್ಟ ವಶಾತ್ ಇದರಿಂದ ಅವರಿಗೆ ಆರೋಗ್ಯ ಕೆಟ್ಟಿತು. ಬಂದ ಜ್ವರ ಬಿಡಲಿಲ್ಲ. ಹಾಸಿಗೆ ಹಿಡಿದು ಮಲಗೇ ಬಿಟ್ಟರು. ಪರೀಕ್ಷೆ ದಿನ ಬಂದರೂ ಕಾಯಿಲೆ ಗುಣವಾಗಲೇ ಇಲ್ಲ. ಪುರಾಣಿಕರ ಕಣ್ಣಲ್ಲಿ ನೀರು ಬಂದಿತು. ಮುಂದೆ ಏನು ಮಾಡ ಬೇಕೆಂದು ದಿಕ್ಕೇ ತೋಚಲಿಲ್ಲ. ಊರಿಗೆ ಬಂದು ತಂದೆ ತಾಯಿಗಳ ಮುಖವನ್ನು ನೋಡಿದಾಗಲಂತೂ ಪುರಾಣಿಕ ರಿಗೆ ಕರುಳು ಕಿತ್ತು ಬರುವಂತಾಯಿತು. ತಂದೆಯವರು ಅನೇಕ ವೈದ್ಯರಿಗೆ ತೋರಿಸಿದರೂ ಜ್ವರ ಕಡಿಮೆ ಆಗಲಿಲ್ಲ. ಕ್ಷಯ ರೋಗ ಬಂದಿರಬೇಕೆಂಬ ಅನುಮಾನ ಉಂಟಾಯಿತು. ಪುರಾಣಿಕರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ದಿನ ವೆಲ್ಲಾ ಯೋಚಿಸಿದರು. ಕೊನೆಗೆ ಯಾರಿಗೂ ಹೇಳದೆ ಕೇಳದೆ ಊರನ್ನು ತೊರೆದು ಮದನಪಲ್ಲಿಗೆ ಬಂದರು. ಅಲ್ಲಿನ ಪ್ರಖ್ಯಾತ ವೈದ್ಯರಾದ ಡಾ. ಬೆಂಜಾಮಿನ್ ಮುಲ್ಲರ್ ಎಂಬು ವವರು ಎಕ್ಸ್-ರೇ ತೆಗೆದು, ರಕ್ತ ಪರೀಕ್ಷೆ ಮೂತ್ರ ಪರೀಕ್ಷೆ ಮಾಡಿ 'ಸಿದ್ಧಯ್ಯ, ನಿನಗೆ ಯಾವ ಕಾಯಿಲೆಯೂ ಇಲ್ಲ. ಸಂಪೂರ್ಣವಾಗಿ ಆರೋಗ್ಯವಾಗಿದ್ದೀಯೆ' ಎಂಬುದಾಗಿ ಹೇಳಿದರು. ಆಗ ಪುರಾಣಿಕರಿಗೆ ಎಲ್ಲಿಲ್ಲದ ಧೈರ್ಯ ಬಂದಿತು. ಮನದಲ್ಲೇ ದೇವರಿಗೆ ನಮಿಸಿದರು. ಮರಳಿ ಊರಿಗೆ ಬಂದಾಗ ಎಲ್ಲರಿಗೂ ಸಂತೋಷವಾಯಿತು.

ಆ ವೇಳೆಗೆ ಮತ್ತೆ ಕಾಲೇಜಿಗೆ ಸೇರುವ ಕಾಲ ಮೀರಿದ್ದರಿಂದ ಪರೀಕ್ಷೆ ಕಟ್ಟಿ ಮನೆಯಲ್ಲೇ ಓದ ತೊಡಗಿದರು. ಪುನಃ ಜ್ವರ ಕಾಣಿಸಿಕೊಂಡಿತು. ಕಲ್ಲಿನಾಥಶಾಸ್ತ್ರಿಗಳು ತಮ್ಮ ಕುಟುಂಬ ಸಮೇತ ಗದುಗಿಗೆ ಬಂದು ಪುರಾಣಿಕರ ಕಾಯಿಲೆ ವಾಸಿಯಾಗುವವರೆಗೂ ಬಾಡಿಗೆ ಮನೆಯಲ್ಲಿ ವಾಸಿಸ ತೊಡಗಿದರು. ಮಗನ ಆರೋಗ್ಯಕ್ಕೋಸ್ಕರ ಅಲ್ಪ ಸ್ವಲ್ಪ ಇದ್ದ ಒಡವೆಯನ್ನು ಮಾರಿದರು. ಅದೂ ಸಾಲದೆ ಕೈಗಡ ಮಾಡಿದರು. ಇದೆಲ್ಲಾ ನೋಡುತ್ತಿದ್ದ ಪುರಾಣಿಕರು "ತಂದೆ ತಾಯಿಗಳಿಗೆ ಇಷ್ಟೊಂದು ಕಷ್ಟ ಕೊಡಲೆಂದೇ ಹುಟ್ಟಿದೆನೊ ಏನೊ" ಎಂಬುದಾಗಿ ಹಲವು ಬಾರಿ ಅನ್ನಿಸಿತು. ಅಂತು ಇಂತು ರೋಗ ವಾಸಿಯಾದ ಮೇಲೆ ಮನೆಗೆ ಮರಳಿದರು. ಮತ್ತೆ ಪರೀಕ್ಷೆಗಾಗಿ ಚೆನ್ನಾಗಿ ಓದತೊಡಗಿದರು. ಇದೇ ಸಮಯದಲ್ಲಿ ಪುರಾಣಿಕರಿಗ ಮದುವೆಯಾಗಲು ತಂದೆ ತಾಯಿಗಳು ಸೂಚಿಸಿದರು. ವಿದ್ಯಾಭ್ಯಾಸಕ್ಕೆ ಮದುವೆಯೂ ಒಂದು ಅಡ್ಡಿಯೆಂದು ತಿಳಿದಿದ್ದ ಪುರಾಣಿಕರು ಮತ್ತೆ ಹೇಳದೆ ಕೇಳದೆ ಮನೆಬಿಟ್ಟರು. ರಾತ್ರಿಯೆಲ್ಲಾ ಪ್ರಯಾಣಮಾಡಿ ಕರ್ನಾಟಕದ ಗಾಂಧಿಯೆನಿಸಿದ್ದ ಹರ್ಡೇಕರ್ ಮಂಜಪ್ಪನವರು ವಾಸವಾಗಿದ್ದ ಆಲಮಟ್ಟಿ ಆಶ್ರಮಕ್ಕೆ ಬಂದರು.

### ಆಲಮಟ್ಟಿ ಆಶ್ರಮದ ಪ್ರಭಾವ

ಆಜನ್ಮ ಬ್ರಹ್ಮಚಾರಿಯಾಗಿದ್ದ ಮಂಜಪ್ಪನವರು



ಸಿದ್ಧಯ್ಯ ಪುರಾಣಿಕರ ವಿಚಾರ ಕೇಳಿ "ನೀನು ಸರಿಯಾದುದನ್ನೇ ಮಾಡಿದೆ. ನೀನು ಇಲ್ಲಿ ಎಷ್ಟು ದಿನ ಬೇಕಾದರೂ ಇರು. ಚೆನ್ನಾಗಿ ಓದು" ಎಂಬುದಾಗಿ ಹರಸಿದರು. ಪುರಾಣಿಕರಿಗೆ ಕುಸಿದಿದ್ದ ಚೇತನ ಪುಟಿಯಿತು. ಮಂಜಪ್ಪನವರ ವ್ಯಕ್ತಿತ್ವ, ಸಕಲ ಧರ್ಮಗಳಲ್ಲಿ ಶ್ರದ್ಧೆ, ನ್ಯಾಯ ಪರತೆ ಇವುಗಳನ್ನು ಕಂಡು ಪುರಾಣಿಕರು ಬೆರಗಾದರು. ಆಶ್ರಮದಲ್ಲಿ ಕಳೆದ ಆರು ತಿಂಗಳು ಪುರಾಣಿಕರ ಜೀವನದಲ್ಲೇ ಮಹತ್ವದ ದಿನಗಳು. ಈ ಅವಧಿಯಲ್ಲಿ ವೇದ, ಉಪನಿಷತ್ತು, ಭಗವದ್ಗೀತೆಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದರು. ಅಷ್ಟೇ ಅಲ್ಲದೆ ಗಾಂಧೀಜಿ, ಗೋಖಲೆ, ರಾಮಕೃಷ್ಣರು, ವಿವೇಕಾನಂದರು ಮುಂತಾದವರ ಬಗ್ಗೆ ಮಂಜಪ್ಪನವರಿಂದ ಹೆಚ್ಚು ವಿಚಾರ ತಿಳಿದರು. ಕರ್ನಾಟಕದ ಏಕೀಕರಣದ ಬಗ್ಗೆ ಗ್ರಾಮೋದ್ಯೋಗದ ಬಗ್ಗೆ ಆಗಾಗ ಚರ್ಚಿಸುತ್ತಿದ್ದರು. ಹೀಗೆ ಹರ್ಡೇಕರ್ ಮಂಜಪ್ಪನವರ ವಿಚಾರಗಳು ಪುರಾಣಿಕರ ಮೇಲೆ ಹೆಚ್ಚು ಪ್ರಭಾವ ಬೀರಿದವು. ಅಷ್ಟೇ ಅಲ್ಲದೆ ಮಂಜಪ್ಪನವರ ಆತ್ಮ ಚರಿತ್ರೆಯಲ್ಲಿ ಓದಿದ "ಈ ದಾರಿಯನ್ನು ಹಿಡಿಯದೆ ನಾನು ವಿವಾಹಿತನಾಗಿದ್ದರೆ ನಾಲ್ಕೈದು ಮಕ್ಕಳನ್ನು ಹುಟ್ಟಿಸಿ ಜನ ಸಂಖ್ಯೆ ಹೆಚ್ಚಿಸಿ ನಾಲ್ಕೈದು ಸಾವಿರ ಕೂಡಿಟ್ಟು ತಿಂಗಳ ವಿಶ್ರಾಂತಿ ವೇತನ ಪಡೆಯುವ ಮಾಸ್ತರನಾಗಿರುತ್ತಿದ್ದೆ. ಆದರೆ ಅದಕ್ಕಿಂತ ಈಗ ಎಷ್ಟೋ ಜನಸೇವೆಯನ್ನು ಮಾಡಿದ್ದೇನೆಂದು

ನನಗೆ ಸಮಾಧಾನ" ಮುಂತಾದ ವಾಕ್ಯಗಳನ್ನು ಪುರಾಣಿಕರು ಈಗಲೂ ನೆನೆಸಿಕೊಳ್ಳುತ್ತಾರೆ.

ಆಲಮಟ್ಟಿ ಆಶ್ರಮದಲ್ಲಿ ಆರು ತಿಂಗಳು ಕಳೆಯಿತು. ಊರಿಗೆ ಮರಳಿದರು. ಮತ್ತೊಮ್ಮೆ ಎಲ್ಲಾ ಓದಿಕೊಂಡು ಹೋಗಿ ಪರೀಕ್ಷೆ ಬರೆದರು. ನಿರೀಕ್ಷೆಯಂತೆ ಪ್ರಥಮಸ್ಥಾನದಲ್ಲಿ ಉತ್ತೀರ್ಣರಾದರು. ತಂದೆ ತಾಯಿಗಳಿಗೆ ಕಳೆದುಹೋದ ನಿಧಿ ಮತ್ತೆ ಸಿಕ್ಕಿದಂತಾಯಿತು.

## ಹೈದರಾಬಾದಿನಲ್ಲಿ

ಪ್ರತಿಯೊಂದು ತರಗತಿಯಲ್ಲೂ ವಿದ್ಯಾರ್ಥಿ ವೇತನ ಪಡೆದು ಓದಿದ ಪುರಾಣಿಕರಿಗೆ ಹೈದರಾಬಾದಿಗೆ ಹೋಗಿ ಪದವಿ ಪರೀಕ್ಷೆ ಓದಲು ತೊಂದರೆಯಾಗಲಿಲ್ಲ. ಪ್ರಿನ್ಸಿಪಾಲ್ ಹಕ್ಕಾನಿ ಸಾಹೇಬರು, ಪ್ರೊ. ಹುಸೇನ ಅಲಿಖಾನ ಸಾಹೇಬರು ಮುಂತಾದ ಗುರುಗಳ ಸಹಕಾರ ದೊರೆಯಿತು. ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವಾಗಲೇ ಜಿ. ಪಿ. ರಾಜರತ್ನಂ, ತೀ. ನಂ. ಶ್ರೀ, ಕನ್ನಡದ ಕಣ್ವರೆನಿಸಿದ ಬಿ. ಎಂ. ಶ್ರೀ, ಮಾಸ್ತಿ, ಬೇಂದ್ರೆ ಮುಂತಾದ ಹಿರಿಯ ಸಾಹಿತಿಗಳ ಪರಿಚಯವಾಯಿತು. ಪದವಿ ಪರೀಕ್ಷೆಯನ್ನು ಪ್ರಥಮ ಸ್ಥಾನದಲ್ಲಿ ಪಾಸುಮಾಡಿದರು. ಮುಂದೆ ಎಲ್. ಎಲ್. ಬಿ. ಓದಿ ವಕೀಲರಾಗಬೇಕೆಂದು ತಂದೆಯವರಿಂದ ಒತ್ತಾಯ ಬಂದಿತು.



ತಂದೆಯವರ ಆಸೆಯಂತೆ ಎಲ್. ಎಲ್. ಬಿ.ಗೆ ಸೇರಿದರು. ಆ ವಿಷಯಗಳು ತಲೆಗೆ ಹಿಡಿಯದೆ, ಒಂದು ವರ್ಷವೂ ಫೇಲಾಗದ ಪುರಾಣಿಕರು ಆ ವರ್ಷ ಫೇಲಾದರು. ಈ ದುಃಖದಲ್ಲಿರುವಾಗಲೇ ತಂಗಿ ವೀರಾಂಬೆಗೆ ತುಂಬಾ ಕಾಯಿಲೆ ಎಂಬ ಸುದ್ದಿ ಬಂದಿತು. ಈ ಕಡೆ ವಿದ್ಯಾರ್ಥಿವೇತನ ಇಲ್ಲದೇ ಇದ್ದುದರಿಂದ ಹಣದ ತೊಂದರೆಯೂ ಹೆಚ್ಚಾಯಿತು. ಈ ಯೋಚನೆಗಳೆಲ್ಲಾ ಸೇರಿಕೊಂಡು ಪುರಾಣಿಕರಿಗೆ ಬರಸಿಡಿಲು ಬಡಿದಂತಾಗಿ, ಮುಂದೇನು ಮಾಡುವುದು ಎಂಬ ಪ್ರಶ್ನೆ ಎದುರು ನಿಂತಿತು. ಆಗ ಎಲ್. ಎಲ್. ಬಿ. ಓದುವುದನ್ನು ಕೈಬಿಟ್ಟರು. ಇಂಗ್ಲಿಷ್ ಎಂ.ಎ.ಗೆ ಸೇರಿದರು. ಇಂಗ್ಲಿಷ್ ತರಗತಿಗಳು ಮಧ್ಯಾಹ್ನದವರೆಗೆ ಮಾತ್ರ ನಡೆಯುತ್ತಿದ್ದವು. ಉಳಿದ ಸಮಯದಲ್ಲಿ ಎಲ್ಲಾದರೂ ಕೆಲಸ ಮಾಡೋಣವೆಂದು ಯೋಚಿಸಿ ಕೆಲಸಕ್ಕೆ ಅಲೆದಾಡಿದರು. ಎಲ್ಲೂ ಕೆಲಸ ಸಿಗಲಿಲ್ಲ. ಹೀಗೆ ಕೆಲಸಕ್ಕಾಗಿ ಅಲೆದಾಡುತ್ತಿರುವ ಸಂದರ್ಭದಲ್ಲಿ ಆಗಿನ ಹೈದರಾಬಾದ್ ಸರ್ಕಾರ ಹದಿನಾರು ತಹಸೀಲ್ದಾರ್ ಹುದ್ದೆಗಳಿಗೆ ಅರ್ಜಿ ಕರೆದರು. "ನೀನೆಲ್ಲಿ, ಆ ದೊಡ್ಡ ಸ್ಥಾನವೆಲ್ಲಿ?" ಎಂಬುದಾಗಿ ಒಳದನಿ ನುಡಿಯುತ್ತಿದ್ದರೂ ಗುರುಗಳ, ಸ್ನೇಹಿತರ ಒತ್ತಾಯದಿಂದ ಅರ್ಜಿ ಹಾಕಿದರು. ಅರ್ಜಿಗೆ ಬೇಕಾದ ದಾಖಲೆಗಳನ್ನು ಒದಗಿಸಲು ಒಂದು ತಿಂಗಳು ಹಿಡಿಯಿತು. ಕಾರಣ ಪುರಾಣಿಕರ ಹತ್ತಿರ ಹಣವಿರಲಿಲ್ಲ. ಕಾಲುನಡಿಗೆಯಲ್ಲೇ ಓಡಾಡಿ ಕಷ್ಟಪಟ್ಟು ದಾಖಲೆ ಪತ್ರ

ಗಳನ್ನು ಪಡೆದು ಕೊನೆಯ ದಿನಾಂಕ ಕಛೇರಿಗೆ ಅರ್ಜಿ ಕೊಟ್ಟು ಮನೆಗೆ ಬಂದು ನೆಮ್ಮದಿಯ ನಿಟ್ಟುಸಿರುಬಿಟ್ಟರು. ಇದರ ಮಧ್ಯೆ ತಂಗಿಯ ಆರೋಗ್ಯ ಕೆಡುತ್ತಲೇ ಇತ್ತು. ಆದರೂ ಇವೆಲ್ಲಾ ತೊಂದರೆಗಳನ್ನು ಸಹಿಸಿಕೊಂಡು ತರಗತಿಗೆ ಹೋಗುತ್ತಿದ್ದರು. ಅಷ್ಟರಲ್ಲಿ ತಹಸೀಲ್ದಾರ್ ಹುದ್ದೆಗೆ ಸಂದರ್ಶನ ಕರೆ ಬಂದಿತು. ಮೊದಲ ಸುತ್ತಿನ ಪರೀಕ್ಷೆಯಲ್ಲೆ ತೂರಿಹೋಗಬಹುದೆಂದು ಭಾವಿಸಿದ್ದ ಪುರಾಣಿಕರು ಮೂರು ಬಾರಿ ನಡೆಸಿದ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ನೇಮಕದ ಬಗ್ಗೆ ಆದೇಶವು ಸಹ ಬಂದಿತು.

## ಸರ್ಕಾರಿ ಸೇವೆಗೆ ಸೇರ್ಪಡೆ

ನೌಕರಿ ಬಗ್ಗೆ ಆದೇಶ ಬಂದಾಗ ಪುರಾಣಿಕರಿಗೆ ಅತ್ಯಂತ ಆನಂದವಾಯಿತು. ಎಲ್ಲಾ ಗುರುಗಳಿಗೂ ಸ್ನೇಹಿತರಿಗೂ ಸಿಹಿ ಹಂಚಿ ಬಂದರು. ಇನ್ನು ಮೇಲೆ ಎಲ್ಲಾ ತೊಂದರೆಗಳು ತಪ್ಪಿದವು, ತಂದೆತಾಯಿ, ತಂಗಿ ತಮ್ಮಂದಿರನ್ನು ಚೆನ್ನಾಗಿ ನೋಡಿಕೊಳ್ಳಬಹುದೆಂದು ಸಂತೋಷಪಡುತ್ತಿರುವಾಗಲೇ ಪುರಾಣಿಕರಿಗೆ ಮತ್ತೊಂದು ದುಃಖದ ಸುದ್ದಿ ಬಂದಿತು. ತಂಗಿ ವೀರಾಂಬೆ ತೀರಿಕೊಂಡಿದ್ದರು. ಒಂದು ಕಡೆ ಆನಂದ, ಮತ್ತೊಂದು ಕಡೆ ವ್ಯಥೆ. ತರಬೇತಿಗೆ ಒಂದು ವಾರದೊಳಗೆ ಹೊರಡಬೇಕಾದುದರಿಂದ ಊರಿಗೆ ಹೋಗಿ ಎಲ್ಲರನ್ನು ಸಮಾಧಾನ ಮಾಡಿ ಬಂದರು. ಎರಡು ತಿಂಗಳು ತರಬೇತಿ



ಪಡೆಯುತ್ತಿರುವಾಗಲೆ ಬಾಳಸಂಗಾತಿಯಾಗಿ ಶ್ರೀಮತಿ ಗಿರಿಜಮ್ಮನವರನ್ನು ಕೈಹಿಡಿದರು.



ಶ್ರೀಮತಿ ಗಿರಿಜಮ್ಮನವರು

## ಕಷ್ಟಗಳ ಸುರಿಮಳೆ

ಇನ್ನೇನು ಬಾಳು ಜೇನಾಯಿತು ಎನ್ನುವಷ್ಟರಲ್ಲಿಯೇ ಬರಸಿಡಿಲಿನಂತೆ ಪುರಾಣಿಕರಿಗೆ ಒಂದರ ಮೇಲೊಂದು ಕಷ್ಟಗಳು ಬರತೊಡಗಿದವು. ಪುರಾಣಿಕರ ಅತ್ತೆಯವರಿಗೆ

ಕಾಯಿಲೆ ಪ್ರಾರಂಭವಾಯಿತು. ತಹಸೀಲ್ದಾರ್ ಆಗಿ ಹೋಗಬೇಕಾಗಿದ್ದ ಪುರಾಣಿಕರಿಗೆ ಭೂ ದಾಖಲೆಗಳ ಉಲ್ಲೇಖನಾ ಅಧಿಕಾರಿಯಾಗಿ ನಾಂದೇಡ ಎಂಬ ಸ್ಥಳಕ್ಕೆ ನೇಮಿಸಿದರು. ನಾಂದೇಡಕ್ಕೆ ಹೋದ ಕೆಲ ದಿನಗಳಲ್ಲೆ ಗಿರಿಜಮ್ಮನವರಿಗೆ ಮೈಯೆಲ್ಲಾ ಬೊಕ್ಕೆಗಳಾದವು. ನಾಂದೇಡ ದಲ್ಲಿ ತಹಸೀಲ್ದಾರ್ ಆಗಿದ್ದವರು ಪುರಾಣಿಕರ ಸಹಪಾಠಿ ಹಾಗೂ ಸ್ನೇಹಿತರಾಗಿದ್ದ ರಾಮ್‌ರಾವ್ ಅವರು. ಮತ್ತೆ ಪುರಾಣಿಕರು, ರಾಮ್‌ರಾವ್ ಅವರು ತುಂಬಾ ಹತ್ತಿರ ವಾದರು.

ಒಮ್ಮೆ ರಾಮ್‌ರಾವ್ ಅವರು ಲೆವಿ ವಸೂಲಿಗಾಗಿ ಒಂದು ಹಳ್ಳಿಗೆ ಹೋದಾಗ ರೈತರೆಲ್ಲಾ ಸೇರಿಕೊಂಡು ರಾಮ್‌ರಾವ್ ಅವರನ್ನು ಕೊಲೆ ಮಾಡಿಬಿಟ್ಟರು. ಈ ಸುದ್ದಿ ಕೇಳಿದ ಪುರಾಣಿಕರಿಗೆ ಎದೆ ಬಿರಿಯಿತು. ಈ ನೋವನ್ನು ಸಹಿಸಿಕೊಳ್ಳುತ್ತಿರುವಾಗಲೆ ಜಿಲ್ಲಾ ಸಾಹೇಬರಾದ ಷಹಾ ಬುದ್ದೀನ್‌ಖಾನ್ ಎಂಬುವವರು ಒಂದು ಸಭೆ ಕರೆದು "ಆ ಹಳ್ಳಿಯಲ್ಲಿ ಲೆವಿ ವಸೂಲಿ ಮಾಡುವ ಧೈರ್ಯ ಯಾರಿಗೂ ಇಲ್ಲವೆ?" ಎಂಬುದಾಗಿ ಅಧಿಕಾರಿಗಳಿಗೆ ಸವಾಲು ಹಾಕಿದರು. ಆಗ ಪುರಾಣಿಕರು ಧೈರ್ಯದಿಂದ ಆ ಕಾರ್ಯವನ್ನು ವಹಿಸಿ ಕೊಂಡರು. ಬಡವರನ್ನು ಗುರ್ತಿಸಿ ಅವರಿಂದ ಲೆವಿ ವಸೂಲಿ ಮಾಡುವ ಬದಲು ಅವರಿಗೆ ರೇಷನ್ ಕಾರ್ಡು ಬರೆದು ಕೊಟ್ಟರು. ಇದರಿಂದ ಬಡವರಿಗೆ ತುಂಬಾ ಅನುಕೂಲ ವಾಯಿತು. ಶ್ರೀಮಂತರು ತಾವಾಗಿಯೇ ಲೆವಿಯನ್ನು ಕೊಡಲು ಮುಂದೆ ಬಂದರು. ಈ ಸುದ್ದಿ ಇಡೀ ಜಿಲ್ಲೆಯನ್ನೇ ವ್ಯಾಪಿಸಿತು. ಇವರ ಕಾರ್ಯದಕ್ಷತೆಯನ್ನು ಕಂಡ ಮೇಲಧಿ ಕಾರಿಗಳು ಪುರಾಣಿಕರ ಕೋರಿಕೆಯಂತೆ ಕಲ್ಬುರ್ಗಿಗೆ ವರ್ಗ ಮಾಡಿದರು. ಪುರಾಣಿಕರಿಗೆ ತುಂಬಾ ಸಂತೋಷವಾಯಿತು.



### ಕಲ್ಬುರ್ಗಿಯಲ್ಲಿ

ದಿನಾಂಕ ೨೨-೮-೪೭ ರಂದು ಪುರಾಣಿಕರು ಭೂ ದಾಖಲೆಗಳ ಉಲ್ಲೇಖನಾ ಅಧಿಕಾರಿಯಾಗಿ ಕಲ್ಬುರ್ಗಿಯಲ್ಲಿ ಅಧಿಕಾರ ವಹಿಸಿಕೊಂಡರು. ಕೈಕೆಳಗಿನ ನೌಕರರು ಒಳ್ಳೆಯವ ರಾದುದರಿಂದ ಎಲ್ಲಾ ಕಾರ್ಯಗಳು ಸುಗಮವಾಗಿ ನಡೆಯ ತೊಡಗಿದವು. ಅಷ್ಟರಲ್ಲಿ ಭಾರತಮಾತೆ ಸ್ವತಂತ್ರಳಾದಳು. ಈ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ. ಗಾಂಧೀಜಿಯವರ ಹತ್ಯೆಯಾಯಿತು. ಹೈದರಾಬಾದ್ ಸಂಸ್ಥಾನವನ್ನು ಪಾಕಿ ಸ್ಥಾನದ ಮೂರನೆಯ ಭಾಗವನ್ನಾಗಿ ಮಾಡಬೇಕೆಂಬ ಭ್ರಮೆ ಕೆಲವರಲ್ಲಿ ಹುಟ್ಟಿತು. ಹಿಂದು ಮುಸ್ಲಿಂ ಸಂಬಂಧಗಳು ಕಹಿ ಗೊಳ್ಳತೊಡಗಿದವು. ಹಳ್ಳಿಗಳಲ್ಲಿ ಲೂಟಿಗಳು, ಅತ್ಯಾಚಾರ ಗಳು ಪ್ರಾರಂಭವಾದವು. ಸೈನಿಕ ಶಿಕ್ಷಣ ಕಡ್ಡಾಯವಾಯಿತು. ಎಲ್ಲೆಲ್ಲೂ ದುಷ್ಕೃತ್ಯಗಳು ನಡೆಯತೊಡಗಿದವು. ಪುರಾಣಿಕರು ತಮ್ಮ ಕುಟುಂಬವನ್ನು ತಂದೆತಾಯಿಗಳ ಹತ್ತಿರ ಕಳುಹಿಸಿ ಕೊಟ್ಟರು. ದುರದೃಷ್ಟವಶಾತ್ ಅವರು ಕಳುಹಿಸಿದ್ದ ರೈಲಿನಲ್ಲಿ

ಮಾರನೆಯ ದಿನವೇ ಅತ್ಯಾಚಾರ ನಡೆದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಈ ಸುದ್ದಿ ತಿಳಿದ ಪುರಾಣಿಕರಿಗೆ ಮೈಯೊಳಗಿನ ರಕ್ತ ಹೆಪ್ಪುಗಟ್ಟಿದಂತಾಯಿತು. 'ಇದೇ ಘಟನೆ ಹಿಂದಿನ ದಿನ ನಡೆದಿದ್ದರೆ ತನ್ನ ಹೆಂಡತಿ ಮಕ್ಕಳಿಗೂ ಇದೇ ಗತಿಯಾಗುತ್ತಿತ್ತು. ದೈವಸಂಕಲ್ಪದಿಂದ ತಪ್ಪಿತು' ಎನ್ನುತ್ತಾರೆ ಪುರಾಣಿಕರು.

ನಿಜಾಮ ಸರ್ಕಾರ ಎಲ್ಲಾ ಅಧಿಕಾರಿಗಳಿಗೂ ಸೈನಿಕ ತರಬೇತಿ ಕೊಡಲು ಪ್ರಾರಂಭಿಸಿದರು. ಪುರಾಣಿಕರು ಎದೆ ಗುಂದದೆ ಆ ಪರಿಸ್ಥಿತಿಯನ್ನು ಎದುರಿಸಿದರು. ಆ ಸಮಯಕ್ಕೆ ಸರಿಯಾಗಿ ಜಿನ್ನಾ ಸಾಹೇಬರ ಸಾವಿನ ಸುದ್ದಿ ಬಂದಿತು. ಸ್ವತಂತ್ರ ಹೈದರಾಬಾದ್ ವಾದಿಗಳಿಗೆ ಪೆಟ್ಟು ಬಿದ್ದಿತು. ಭಾರತ ಸೇನೆ ಮಿಂಚಿನ ವೇಗದಲ್ಲಿ ಬಂದು ನಿಜಾಮನನ್ನು ಶರಣಾಗುವಂತೆ ಮಾಡಿತು. ಎಲ್ಲೆಲ್ಲೂ 'ಸರ್ದಾರ್ ವಲ್ಲಭಾಯಿ ಪಟೇಲ್‌ಕಿ ಜೈ, ಮಹಾತ್ಮಾ ಗಾಂಧಿಕಿ ಜೈ' ಎಂಬ ಘೋಷಣೆಗಳು ಆಕಾಶ ಮುಟ್ಟಿದವು. ಕಲ್ಬುರ್ಗಿಯನ್ನು ತೊರೆದು ಹೋದವರೆಲ್ಲಾ ಮತ್ತೆ ಬಂದರು. ಹಿಂದು ಮುಸ್ಲಿಂ ಗಲಾಟೆಯಲ್ಲಿ ನೊಂದವರಿಗೆ ಪರಿಹಾರ ಕೊಡಿಸುವ ಭಾರ ಪುರಾಣಿಕರ ಮೇಲೆ ಬಿತ್ತು. ರಾತ್ರಿ ಹಗಲು ದುಡಿದು ಹಾನಿಗೊಳಗಾದವರಿಗೆ ಪರಿಹಾರ ಕೊಡಿಸಿದರು. ಎಲ್ಲಾ ಕಡೆಯು ಶಾಂತಿ ನೆಲಸಿತು. ಆ ವರ್ಷ ಕಲ್ಬುರ್ಗಿಯಲ್ಲಿ ಅಖಿಲ ಕರ್ನಾಟಕ



ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಜೃಂಭಣೆಯಿಂದ ನಡೆಸಿದರು.

## ಅಸಿಸ್ಟೆಂಟ್ ಕಮಿಷನರ್ ಆಗಿ

೧೯೪೩ ರಲ್ಲಿ ಕೆಲಸಕ್ಕೆ ಸೇರಿದ ಪುರಾಣಿಕರಿಗೆ ೧೯೪೮ ರಲ್ಲಿ ಬಡ್ತಿಸಿಕ್ಕಿ ಅಸಿಸ್ಟೆಂಟ್ ಕಮಿಷನರ್ ಆಗಿ ಹೈದರಾಬಾದಿಗೆ ವರ್ಗವಾಯಿತು. ಹಿಂದೆ ಹೈದರಾಬಾದಿನಲ್ಲಿ ಓದುತ್ತಿದ್ದಾಗ ಸಹಾಯಮಾಡಿದ ಹುಸೇನ್ ಅಲಿಖಾನ್ ಸಾಹೇಬ್ ಗುರುಗಳ ವಾತ್ಸಲ್ಯ ಮತ್ತೆ ಬರಮಾಡಿಕೊಂಡಿತು. ಕನ್ನಡದ ಕಾರ್ಯಕ್ರಮಗಳು ಜರುಗುವುದಕ್ಕೆ ಪ್ರಾರಂಭಿಸಿದವು. ಪ್ರೊ. ಡಿ. ಕೆ. ಭೀಮಸೇನರಾಯರು ಅಧ್ಯಕ್ಷರಾಗಿದ್ದ ಕರ್ನಾಟಕ ಸಾಹಿತ್ಯ ಮಂದಿರಕ್ಕೆ ಪುರಾಣಿಕರು ಉಪಾಧ್ಯಕ್ಷರಾದರು. ಅನೇಕ ಕಾರ್ಯಕ್ರಮಗಳಿಗೆ ಯುವ ಕನ್ನಡ ಸಾಹಿತ್ಯ ಕಲಾವಿದರು ಬರತೊಡಗಿದರು.

ಪುರಾಣಿಕರಿಗೆ ಸಾಹಿತ್ಯದ ಕಡೆ ಹೆಚ್ಚು ಒಲವು ಇದ್ದರೂ ಸರ್ಕಾರಿ ಸೇವೆಯನ್ನು ಎಂದಿಗೂ ಕಡೆಗಣಿಸಿರಲಿಲ್ಲ. ಹಗಲು ರಾತ್ರಿ ದುಡಿಯುತ್ತಿದ್ದರು. ಹೈದರಾಬಾದು ಸಂಸ್ಥಾನದಲ್ಲಿ ಜಾಗೀರು ಪದ್ಧತಿ ರದ್ದುಗೊಂಡಾಗ ಜಾಗೀರುದಾರರಿಗೆ ಪರಿಹಾರ ಧನವನ್ನು ತುಂಬ ಶ್ರಮವಹಿಸಿ ವಿತರಿಸಿದರು. ರೈತರಿಗೆ ಕಂದಾಯ ಕಡಿಮೆ ಮಾಡಿಸಿದರು. ಮಹಾರಾಷ್ಟ್ರಕ್ಕೆ ಹೋಗಬೇಕಾಗಿದ್ದ ಸ್ಥಳಗಳನ್ನು ಗುರ್ತಿಸಿ ವಿಭಾಗ ಮಾಡಿ

ಸರ್ಕಾರಕ್ಕೆ ವರದಿ ಕಳುಹಿಸಿದರು. ಇಂದಿನ ಬೀದರ್ ಜಿಲ್ಲೆಯಲ್ಲಿರುವ ಕನ್ನಡ ಕಾಶಿಯೆನಿಸಿಕೊಂಡಿದ್ದ "ಬಸವ ಕಲ್ಯಾಣ" ಪುರಾಣಿಕರಿಂದ ಕರ್ನಾಟಕದಲ್ಲೇ ಉಳಿಯಿತು. ೧೯೫೨ ರಲ್ಲಿ ವಸತಿ ಮತ್ತು ನೀರು ಪೂರೈಕೆಯ ಮಂತ್ರಿಗಳಾಗಿದ್ದ ಅಣ್ಣಾರಾವ್ ಗಣಮುಖಿಯವರು ಪುರಾಣಿಕರ ಸೇವೆಯನ್ನು ಗುರ್ತಿಸಿ ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ಮಂತ್ರಿಗಳಿಗೆ ಒಳ್ಳೆಯ ಹೆಸರು ತರಬೇಕೆಂಬ ದೃಷ್ಟಿಯಿಂದ ಹಗಲು ರಾತ್ರಿ ದುಡಿದರು. ಕುಡಿಯುವ ನೀರು, ರಸ್ತೆ ನಿರ್ಮಾಣ, ಚರಂಡಿ ವ್ಯವಸ್ಥೆ ಮುಂತಾದ ಜನಕಲ್ಯಾಣ ಯೋಜನೆಗಳನ್ನು ಪ್ರಾರಂಭಿಸಿದರು. ಗಡಿ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ತೆರೆಸಿದರು. ಬೀದರ್‌ನಲ್ಲಿ ಏಳು ದಿನಗಳ ನಾಡಹಬ್ಬಕ್ಕೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರನ್ನು ಕರೆಸಿ ಕನ್ನಡದ ಬಗ್ಗೆ ಜನರಿಗೆ ಪ್ರೀತಿ, ಉತ್ಸಾಹ ಹುಟ್ಟುವಂತೆ ಮಾಡಿದರು.

೧೯೫೪ರಲ್ಲಿ ಪುರಾಣಿಕರು ಕೃಷಿ ಮಂತ್ರಿಗಳಾದ ಡಾ. ಚೆನ್ನಾರೆಡ್ಡಿಯವರ ಆಪ್ತ ಕಾರ್ಯದರ್ಶಿಗಳಾದರು. ಮಂತ್ರಿಗಳಿಂದ ಕನ್ನಡದ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಡಾ. ಚೆನ್ನಾರೆಡ್ಡಿಯವರ ಉದಾರ ದೃಷ್ಟಿ ವಿಶಾಲತೆ ಪುರಾಣಿಕರಿಗೆ ನಿಜವಾಗಿಯೂ ಆಶ್ಚರ್ಯ ತಂದಿತ್ತು. ಇದಕ್ಕೆ ಕಾರಣ ರೆಡ್ಡಿಯವರ ಮಾತೃಭಾಷೆ ತೆಲುಗು. ಕನ್ನಡ ನಾಡು ನುಡಿಗಾಗಿ ನಿದ್ರೆ ನೀರಡಿಕೆಗಳಿಲ್ಲದೆ ದುಡಿದ ಪುರಾಣಿಕ



ರಿಗೆ ಕೆಲವು ಸಂಘ ಸಂಸ್ಥೆಗಳು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲು ನಿರ್ಧರಿಸಿದಾಗ ಕನ್ನಡ ನಾಡಿನ ಕನ್ನಡಿಗರಾದ ಮೇಲಧಿಕಾರಿಗಳೇ ಆ ಸಮಾರಂಭಗಳಲ್ಲಿ ಭಾಗವಹಿಸಲು ಪುರಾಣಿಕರಿಗೆ ಅವಕಾಶ ಕೊಡಲಿಲ್ಲ. "ಇವರ ಸಣ್ಣತನವೆಲ್ಲಿ? ರೆಡ್ಡಿಯವರ ಉದಾರತೆಯೆಲ್ಲಿ?" ಎಂಬುದಾಗಿ ಪುರಾಣಿಕರು ನೊಂದು ನುಡಿಯುತ್ತಾರೆ. ಆದರೂ ಕನ್ನಡಮ್ಮನ ಸೇವೆ ಬಿಡಲಿಲ್ಲ. ತಾವು ಹೋದಕಡೆಯಲ್ಲೆಲ್ಲಾ ಕನ್ನಡದ ಬಗ್ಗೆ ಉಪನ್ಯಾಸ ನೀಡಿ ಜನರನ್ನು ಸಂತೋಷದ ಕಡಲಿನಲ್ಲಿ ಮುಳುಗಿಸುತ್ತಿದ್ದರು.

### ಡೆಪ್ಯುಟಿ ಕಲೆಕ್ಟರ್ ಆಗಿ

೧೯೫೫ ರಲ್ಲಿ ರಾಜ್ಯ ಪುನರ್ರಚನೆಯ ಸಂದರ್ಭದಲ್ಲಿ ಪುರಾಣಿಕರಿಗೆ ಡೆಪ್ಯುಟಿ ಕಲೆಕ್ಟರ್ ಆಗಿ ತಾಂಡೂರಿಗೆ ವರ್ಗವಾಯಿತು. ಅಲ್ಲಿಯೂ ಸಹ ಜನರಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ಕೈಗೊಂಡರು. ಇದೇ ಸಂದರ್ಭದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಾತ್ರೆ ಕೈಗೊಂಡಿದ್ದರು. ಪುರಾಣಿಕರು ಭಾವೆಯವರಿಗೆ ಸಾವಿರಾರು ಎಕರೆಗಳ ದಾನ ಪತ್ರಗಳನ್ನು ಜನರಿಂದ ಕೊಡಿಸಿಕೊಟ್ಟರು.

ಅಷ್ಟರಲ್ಲಿ ಅನಿರೀಕ್ಷಿತವಾಗಿ ನಿಜಲಿಂಗಪ್ಪನವರ ಮಂತ್ರಿ ಮಂಡಲ ಹೋಗಿ ಜತ್ತಿಯವರ ಮಂತ್ರಿಮಂಡಲ

ಅಧಿಕಾರಕ್ಕೆ ಬಂದಿತು. ಮತ್ತೆ ಅಣ್ಣಾರಾವ್‌ಗಣಮುಖಿಯವರು ಶಿಕ್ಷಣ ಮಂತ್ರಿಗಳಾದರು. ಪುರಾಣಿಕರು ಅವರಿಗೆ ಅಧೀನ ಕಾರ್ಯದರ್ಶಿಯಾಗಿ ಬೆಂಗಳೂರಿಗೆ ಬಂದರು. ಈ ಇಲಾಖೆಗೆ ಬಂದಾಗ ಹಳೆಯ ಕಡತಗಳ ವಿಲೇವಾರಿಯೆ ಹೆಚ್ಚು ದಿನಗಳನ್ನು ತಿಂದು ಹಾಕಿತು. ತುಕ್ಕು ಹಿಡಿದಿದ್ದ ಶಿಕ್ಷಣ ಇಲಾಖೆಯನ್ನು ಚುರುಕುಗೊಳಿಸಿದರು. ಹಳ್ಳಿಗಳಲ್ಲಿ ಹೊಸ ಹೊಸ ಶಾಲೆಗಳನ್ನು ತೆರೆಸಿದರು. ಕನ್ನಡ ವಿಶ್ವಕೋಶ ಯೋಜನೆ, ಕನ್ನಡ ನಿಘಂಟು ಯೋಜನೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ, ಮಧ್ಯಾಹ್ನ ಉಪಹಾರ ಯೋಜನೆ ಮುಂತಾದ ಯೋಜನೆಗಳನ್ನು ಜಾರಿಗೆ ತಂದರು.

## ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ

೧೯೬೩ ರಲ್ಲಿ ಪುರಾಣಿಕರಿಗೆ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ ವರ್ಗವಾಯಿತು. ಕನ್ನಡ ಪ್ರಚಾರದ ಕೆಲಸ ಮಾಡಲು ಒಳ್ಳೆಯ ಸದವಕಾಶ ಲಭಿಸಿತು. ಜಾಹೀರಾತು ಹಣ ಕೇವಲ ದೊಡ್ಡ ದೊಡ್ಡ ಪತ್ರಿಕೆಗಳ ಪಾಲಾಗುವುದನ್ನು ತಪ್ಪಿಸಿ ಸಣ್ಣ ಸಣ್ಣ ಪತ್ರಿಕೆಗಳಿಗೂ ಸಿಗುವಂತೆ ಮಾಡಿದರು. ಅನೇಕ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಿದರು.





ವಾರ್ತಾ ಇಲಾಖೆಯ ನಿರ್ದೇಶಕರಾಗಿ ಪುರಾಣಿಕರು ಅಗ್ರಗಣ್ಯರೊಡನೆ

ಇದೇ ಸಮಯದಲ್ಲಿ ಭಾರತದ ಮೇಲೆ ಚೀನಿಯರ ಪ್ರಾರಂಭವಾಯಿತು. ವಾರ್ತಾ ಇಲಾಖೆಯ ಪಾತ್ರ ಬಹಳ ಪ್ರಾಮುಖ್ಯದಿಂದ ಕೂಡಿದ್ದರಿಂದ ಪುರಾಣಿಕರು ಜನರನ್ನು ಜಾಗೃತಗೊಳಿಸಲು 'ಜಯಭೇರಿ' ಎಂಬ ವಾರ ಪತ್ರಿಕೆಯನ್ನು ಹೊರಡಿಸಿದರು. ಸೈನ್ಯಕ್ಕೆ ಜನರಿಂದ ಹೆಚ್ಚು ಸಹಾಯವನ್ನು ಒದಗಿಸಿದರು.

ಅನಂತರ ೧೯೬೪ರಲ್ಲಿ ಪುರಾಣಿಕರಿಗೆ ಹಣಕಾಸು ಇಲಾಖೆಯ ಉಪಕಾರ್ಯದರ್ಶಿ ಹಾಗು ಸುವರ್ಣ ನಿಯಂತ್ರಣಾಧಿಕಾರಿಯಾಗಿ ವರ್ಗವಾಯಿತು. ಆ ಸ್ಥಾನಕ್ಕೆ ಹೋದ ಕೂಡಲೆ ಬೃಹದಾಕಾರವಾಗಿ ಬೆಳೆದಿದ್ದ ಅಕ್ಕಸಾಲಿಗರ ಸಮಸ್ಯೆಯೊಂದು ಎದುರಿಗೆ ಬಂದಿತು. ಸುವರ್ಣ ನಿಯಂತ್ರಣ ಕಾಯಿದೆ ಬಂದಿದ್ದರಿಂದ ಸಾವಿರಾರು ಅಕ್ಕಸಾಲಿಗರು ಬೀದಿ ಪಾಲಾಗುವ ಪರಿಸ್ಥಿತಿ ಬಂದಿತ್ತು. ಇದಕ್ಕೆ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಸಿ ಅಕ್ಕಸಾಲಿಗರಿಗೆ ಭೂಮಿ, ಉದ್ಯೋಗ, ಹಣದ ಸಾಲ ಕೊಡಿಸುವುದರ ಮೂಲಕ ಅವರ ಸಮಸ್ಯೆಯನ್ನು ಬಗೆ ಹರಿಸಿದರು. ಸಣ್ಣ ಉಳಿತಾಯ ಯೋಜನೆಯಿಂದ ಅರ್ಧ ಕೋಟಿ ರೂಗಳನ್ನು ಪಾದಯಾತ್ರೆಯ ಮೂಲಕ ಸಂಗ್ರಹಿಸಿದರು.

### ಕೊಡಗಿನ ಜಿಲ್ಲಾಧಿಕಾರಿಯಾಗಿ

ಹಣಕಾಸಿನ ಇಲಾಖೆಯಲ್ಲಿ ಕೆಲವು ಸುಧಾರಣೆಗಳನ್ನು



ತರಬೇಕೆನ್ನುವಷ್ಟರಲ್ಲಿ ಪುರಾಣಿಕರಿಗೆ ಕೊಡಗಿನ ಜಿಲ್ಲಾಧಿಕಾರಿಯಾಗಿ ವರ್ಗವಾಯಿತು. ಆ ಸಮಯದಲ್ಲಿ ಪುರಾಣಿಕರಿಗೆ ಸ್ವಲ್ಪ ಅನಾರೋಗ್ಯವಿತ್ತು. ಮಕ್ಕಳಾದ ವಿಜಯಾ, ಶಿವಗೀತಾ, ಪ್ರಸನ್ನಕುಮಾರರು ಮೆಡಿಕಲ್, ಇಂಜಿನಿಯರಿಂಗ್ ಓದುತ್ತಿದ್ದರು. ವೈಯಕ್ತಿಕವಾಗಿ ಪುರಾಣಿಕರಿಗೆ ಹೆಚ್ಚು ತೊಂದರೆಗಳಿದ್ದವು. ಅವುಗಳನ್ನೆಲ್ಲಾ ಬದಿಗಿರಿಸಿ ಕೊಡಗಿಗೆ ಮಡದಿ, ಕೊನೆಯ ಮಗಳು ಭಾರತ ಜ್ಯೋತಿಯರೊಡನೆ ಹೋದರು. ಪ್ರಾರಂಭದಲ್ಲಿ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು. ಆದರೂ ಎದೆಗುಂದದೆ ಕೆಲಸಮಾಡತೊಡಗಿದರು. ಕೊಡಗಿನಲ್ಲಿ ಸದಾ ಮಳೆ ಬೀಳುತ್ತಿದ್ದರೂ ಕುಡಿಯುವ ನೀರಿನ ಕೊರತೆಯಿತ್ತು. ವಿದ್ಯುತ್ ಸರಬರಾಜು, ರಸ್ತೆ ಚರಂಡಿ ವ್ಯವಸ್ಥೆ ಇವುಗಳನ್ನೆಲ್ಲಾ ಅಲ್ಪ ಅವಧಿಯಲ್ಲಿಯೇ ಕಾರ್ಯಗತಗೊಳಿಸಿದರು. ಯಾವುದೇ ಗ್ರಾಮದಿಂದ ಅರ್ಜಿ ಬಂದರೂ ತಕ್ಷಣ ಅಲ್ಲಿಗೆ ಹೋಗಿ ಜನರ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು. ಇದೇ ಕಾಲದಲ್ಲಿ ಮತ್ತೆ ಪಾಕಿಸ್ಥಾನ ಯುದ್ಧ ಪ್ರಾರಂಭವಾಯಿತು. ಕೊಡಗಿನ ವೀರರಿಂದ ಸಾಕಷ್ಟು ಹಣವನ್ನು ಸಂಗ್ರಹಿಸಿ ರಕ್ಷಣಾನಿಧಿಗೆ ಕಳುಹಿಸಿಕೊಟ್ಟರು. ರಕ್ಷಣಾನಿಧಿ, ಸೈನಿಕ ಭರ್ತಿ, ಸಣ್ಣ ಉಳಿತಾಯ ಈ ಮೂರು ಕ್ಷೇತ್ರಗಳಲ್ಲಿ ಕೊಡಗು ಜಿಲ್ಲೆ ಪ್ರಥಮಸ್ಥಾನ ಪಡೆಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಪುರಾಣಿಕರನ್ನು ಬಾಯಿತುಂಬಾ ಹೊಗಳಿದರು. ಪುರಾಣಿಕರು ಇಲ್ಲಿಯೂ

ಸಹ ಕನ್ನಡದ ಬಗ್ಗೆ ಹೆಚ್ಚು ಕೆಲಸ ಮಾಡಿದರು ಅನೇಕ ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿದರು. ವಾರಕ್ಕೆ ಎರಡು ದಿನ ಕನ್ನಡ ಚಿತ್ರವನ್ನು ಪ್ರದರ್ಶಿಸಬೇಕೆಂದು ಕಡ್ಡಾಯ ಮಾಡಿದರು.

೧೯೬೭ ರಲ್ಲಿ ಮತ್ತೆ ಸಾರಿಗೆ ಕಮಿಷನರ್ ಆಗಿ ಬೆಂಗಳೂರಿಗೆ ವರ್ಗವಾಯಿತು. ಅಲ್ಲಿಯೂ ಸಹ ಅನೇಕ ಸುಧಾರಣೆಗಳನ್ನು ಮಾಡಿದರು. ವಾಹನಗಳ ಮೇಲಿನ ಕರಗಳನ್ನು ಹೆಚ್ಚಿಸದೆ ಖಾಸಗಿ ಒಡೆಯರ ಮೇಲೆ ಪದೇ ಪದೇ ಧಾಳಿಮಾಡುತ್ತಿದ್ದುದರಿಂದ ಸಾರಿಗೆ ಇಲಾಖೆಗೆ ಹನ್ನೊಂದುವರೆ ಕೋಟಿ ರೂಗಳು ಆದಾಯ ಬಂದಿತು. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಬಸ್ಸುಗಳ ಸೌಕರ್ಯ ಒದಗಿಸಿಕೊಟ್ಟರು.

ಸಾರಿಗೆ ಕಮೀಷನರ್ ಆಗಿ ಕೆಲಸಮಾಡುತ್ತಿದ್ದ ಕಾಲದಲ್ಲಿ ಪುರಾಣಿಕರಿಗೆ ಒಂದು ದೊಡ್ಡ ಆಘಾತ ಉಂಟಾಯಿತು. ಮಾರ್ಗದರ್ಶಿಯಾಗಿದ್ದ, ಗುರುವಾಗಿದ್ದ, ವಾತ್ಸಲ್ಯ ನಿಧಿಯಾಗಿದ್ದ ತಂದೆ ಕಲ್ಲಿನಾಥ ಶಾಸ್ತ್ರಿಗಳು ತೀರಿಕೊಂಡರು. ಈ ದುಃಖದಿಂದ ಚೇತರಿಸಿಕೊಳ್ಳುವಷ್ಟರಲ್ಲೇ ಮತ್ತೆ ಜಿಲ್ಲಾಧಿಕಾರಿಯಾಗಿ ಬೆಳಗಾವಿಗೆ ವರ್ಗವಾಯಿತು.

## ಬೆಳಗಾವಿ ಜಿಲ್ಲಾಧಿಕಾರಿಯಾಗಿ

ಪುರಾಣಿಕರು ೧೯೭೦ ರಲ್ಲಿ ಬೆಳಗಾವಿಗೆ ಜಿಲ್ಲಾಧಿಕಾರಿಯಾಗಿ ಬಂದಾಗ ಬೆಳಗಾವಿ ಜಿಲ್ಲೆ ಮುಳ್ಳಿನ ಹಾಸಿಗೆ




ಯಾಗಿತ್ತು. ಕನ್ನಡ ಮರಾಠಿ ಭಾಷಾ ವಿವಾದ, ಗಡಿವಿವಾದ ಮುಂತಾದ ಅನೇಕ ಸಮಸ್ಯೆಗಳು ತುಂಬಿ ತುಳುಕುತ್ತಿದ್ದವು. ಇವೆಲ್ಲವನ್ನು ಎದೆಗುಂದದೆ ಧೈರ್ಯದಿಂದ ಎದುರಿಸಿದರು. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಎಂ. ಕೆ. ಹುಬ್ಬಳ್ಳಿ ಸಕ್ಕರೆ ಕಾರ್ಖಾನೆ ತೆರೆಯುವುದಕ್ಕೆ ಹೆಚ್ಚು ಅಡಚಣೆಗಳಿದ್ದವು. ಅವುಗಳನ್ನೆಲ್ಲಾ ಎದುರಿಸಿ ಮತ್ತೆ ಅದಕ್ಕೆ ಜೀವ ಕೊಟ್ಟರು. ಈ ಜಿಲ್ಲೆಯಲ್ಲಿ ಪುರಾಣಿಕರು ಮಾಡಿದ್ದು ಮತ್ತೊಂದು ಮಹತ್ವದ ಕೆಲಸ ಮಲಪ್ರಭಾ ಯೋಜನೆಗೆ ಸಂಬಂಧಿಸಿದ್ದು. ಮುಳುಗಡೆ ಆಗಲಿದ್ದ ಪ್ರದೇಶದ ಜನರಿಗೆಲ್ಲಾ ಪುನರ್ವಸತಿ ಒದಗಿಸಿ ಕೊಟ್ಟರು.

ಈ ಸಂದರ್ಭದಲ್ಲಿ ಮತ್ತೊಂದು ದುರಂತದ ಘಟನೆ ನಡೆಯಿತು. ಮಲಪ್ರಭಾ ನದಿಗೆ ಅಣೆಕಟ್ಟು ಕಟ್ಟುವಾಗ ಒಮ್ಮೆ ಜೋರಾಗಿ ಮಳೆ ಬಂದಿತು. ರಾತ್ರೋರಾತ್ರಿ ಮುಳುಗಡೆ ಯಾಗುತ್ತಿದ್ದ ಅನೇಕ ಹಳ್ಳಿಗಳನ್ನು ಸ್ಥಳಾಂತರ ಮಾಡಿಸಿದರು. ಅಲ್ಲೊಂದು ಚಿದಂಬರಸ್ವಾಮಿ ಎಂಬ ದೇವಾಲಯವಿತ್ತು. ಆ ದೇವಾಲಯಕ್ಕೂ ನೀರು ನುಗ್ಗಿತು. ಪುರಾಣಿಕರು ಅಲ್ಲಿನ ಶಿವಲಿಂಗವನ್ನು ಉಳಿಸಿ ಮುಂದೆ ಅದನ್ನು ಎಲ್ಲಾದರೂ ಕಟ್ಟಬಹುದೆಂದು ನೆನೆದು ನಾಲ್ವರ ಸಹಾಯದೊಡನೆ ದೇವಸ್ಥಾನದ ಒಳಗೆ ಹೋದರು ಶಿವಲಿಂಗವನ್ನೆತ್ತಿಕೊಂಡು ಗರ್ಭಗುಡಿಯಿಂದ ಹೊರಗೆ ಬಂದು ದೋಣಿಯಲ್ಲಿ ಕುಳಿತು ಕೊಳ್ಳುವಷ್ಟರಲ್ಲಿಯೇ ಭೋರ್ಗರೆ

ಯುತ್ತಾ ಬಂದ ನೀರಿಗೆ ದೇವಾಲಯ ನೈವೇದ್ಯವಾಯಿತು. ಕೇವಲ ಐದು ನಿಮಿಷ ತಡವಾಗಿದ್ದರೆ ಪುರಾಣಿಕರು ಸಹ ನೈವೇದ್ಯವಾಗುತ್ತಿದ್ದರು.

ಇದೇ ಸಮಯದಲ್ಲಿ ಬಾಂಗ್ಲಾ ಯುದ್ಧ ಪ್ರಾರಂಭವಾಯಿತು. ಯುದ್ಧದಲ್ಲಿ ಭಾರತಕ್ಕೆ ಜಯ ಲಭಿಸಿದರೂ ಬೆಳಗಾವಿ ಜಿಲ್ಲೆಯ ನೂರಾರು ಯೋಧರು ಯುದ್ಧರಂಗದಲ್ಲಿ ಮಡಿದಿದ್ದರು, ಕೆಲವರು ಗಾಯಗೊಂಡಿದ್ದರು. ಅವರ ಕುಟುಂಬಗಳಿಗೆಲ್ಲಾ ಉದ್ಯೋಗ ಮುಂತಾದ ಪರಿಹಾರಗಳನ್ನು ಒದಗಿಸಿಕೊಡುವಷ್ಟರಲ್ಲಿ ಮತ್ತೊಂದು ಸಮಸ್ಯೆ



ದಿ|| ರಾಷ್ಟ್ರಪತಿ ವಿ. ವಿ. ಗಿರಿಯವರೊಡನೆ ಪುರಾಣಿಕರು



ಎದುರಾಯಿತು. ಅದು ಬರಗಾಲ ಸಮಸ್ಯೆ. ಪುರಾಣಿಕರೇ ಬರಗಾಲಪೀಡಿತ ಪ್ರದೇಶಗಳಿಗೆ ಖುದ್ದಾಗಿ ಹೋಗಿ ಸೂಕ್ತ ಕಾಮಕಾರಿಗಳನ್ನು ಸ್ಥಳದಲ್ಲೇ ಮಂಜೂರು ಮಾಡತೊಡಗಿದರು. ಗೋಧಿ ಅಲ್ಲಿನ ಜನಕ್ಕೆ ಒಗ್ಗುತ್ತಿರಲಿಲ್ಲ. ಬೇರೆ ಕಡೆಯಿಂದ ಅವರಿಗೆ ಜೋಳವನ್ನೇ ತರಿಸಿಕೊಟ್ಟರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರು ಬೆಳಗಾವಿಗೆ ಭೇಟಿ ನೀಡಿ ಅಲ್ಲಿನ ಕಾರ್ಯಗಳನ್ನು ಗಮನಿಸಿ ಸಂತೋಷಪಟ್ಟರು. ತಾವು ಹೋದ ಕಡೆಯಲ್ಲೆಲ್ಲಾ ಪುರಾಣಿಕರನ್ನು ಹೊಗಳಿದರು.

## ಕಾರ್ಮಿಕ ಕಮಿಷನರ್ ಆಗಿ

೧೯೭೨ರಲ್ಲಿ ಪುರಾಣಿಕರಿಗೆ ಕಾರ್ಮಿಕ ಕಮಿಷನರ್ ಆಗಿ ಬೆಂಗಳೂರಿಗೆ ವರ್ಗವಾಯಿತು. ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರಿಗೂ ಮಾಲೀಕರಿಗೂ ಇದ್ದ ಅಂತರವನ್ನು ಕಡಿಮೆ ಮಾಡಿ ಇಬ್ಬರಿಗೂ ಸೌಹಾರ್ದ ರೀತಿಯಲ್ಲಿ ಸಂದಾನಗಳನ್ನು ಮಾಡಿದರು. ಕಾರ್ಮಿಕರಿಗೆ ಕನಿಷ್ಟ ವೇತನ ಜಾರಿಗೆ ಬರುವಂತೆ ಮಾಡಿದರು. ರಾಷ್ಟ್ರದ ಬಹು ದೊಡ್ಡ ಉದ್ಯಮವಾಗಿರುವ ಜವಳಿ ಗಿರಣಿಗಳಲ್ಲಿ ಅಸಮಾನ ವೇತನಗಳಿದ್ದವು. ಅವುಗಳನ್ನೆಲ್ಲಾ ಸರಿಪಡಿಸಿದರು. ನಾಲ್ಕು ತಿಂಗಳುಗಳ ಕಾಲ ವಿದೇಶ ಪ್ರವಾಸ ಮಾಡಿ ಬಂದರು.


ಹೀಗೆ ವಿವಿಧ ಇಲಾಖೆಗಳಲ್ಲಿ ಪುರಾಣಿಕರು ತಮ್ಮ

ಕರ್ತವ್ಯವನ್ನು ಪೂರ್ಣವಾಗಿ ಮಾಡಿದರು. ತಮ್ಮ ಅಧಿಕಾರದ ಅವಧಿಯಲ್ಲಿ ಯಾರಿಗೂ ಕಿರುಕುಳ ಕೊಡಲಿಲ್ಲ. ದರ್ಪದಿಂದ ಮೆರೆಯಲಿಲ್ಲ. ಸರ್ಕಾರಿ ಸೇವೆಗೆ ಹಗಲು ರಾತ್ರಿ ದುಡಿದ ಪುರಾಣಿಕರು ೧೯೭೬ರಲ್ಲಿ ತಮ್ಮ ಸೇವಾಜೀವನವನ್ನು ಮುಗಿಸಿ ಸ್ವತಂತ್ರರಾದರು. ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಒಳ್ಳೆಯ ಹೆಸರು ಗಳಿಸಿದರು. ತಮ್ಮ ಕೆಲಸಕ್ಕೆ ದೊರೆತ ಪ್ರತಿಫಲದ ಬಗ್ಗೆ ಪುರಾಣಿಕರು ಮಾತನಾಡುತ್ತಾ, ಹೀಗೆ ಹೇಳುತ್ತಾರೆ "ಒಳ್ಳೆಯ ಕೆಲಸಕ್ಕೆ ಸಿಗುವ ಪ್ರತಿಫಲವೆಂದರೆ ಮತ್ತಷ್ಟು ಕೆಲಸ ಹೇಳುವುದು".

## ಸಾಹಿತ್ಯ ಸೇವೆ

ಪುರಾಣಿಕರ ಪೂರ್ವಜರು ಕವಿಗಳಾದ್ದರಿಂದ ಪುರಾಣಿಕರು ಸಹ ಸ್ವಭಾವತಃ ಕವಿಗಳಾದರು. ಇವರ ಸಾಹಿತ್ಯ 'ಬೆಳಕು' ಎಂಬ ಕವನದಲ್ಲಿ ಮೊಗ್ಗಾಗಿ 'ವಚನೋದ್ಯಾನ'ದಲ್ಲಿ ಅರಳಿ ಎಲ್ಲಾ ಕಡೆ ತನ್ನ ಸುವಾಸನೆ ಬೀರಿತು. ಸಾಹಿತ್ಯದ ಬಗ್ಗೆ ಸಾಕಷ್ಟು ಅಭಿರುಚಿಯಿದ್ದ ಪುರಾಣಿಕರಿಗೆ ಆಲಮಟ್ಟಿ ಆಶ್ರಮದಲ್ಲಿ ಅದಕ್ಕೆ ಇನ್ನೂ ಪುಷ್ಟಿ ದೊರೆಯಿತು. ಅಲ್ಲಿನ ಗ್ರಂಥ ಭಂಡಾರ ತುಂಬಾ ದೊಡ್ಡದಾಗಿತ್ತು. ರಸ್ಕಿನ್, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿದರು. ವಚನ ಸಾಹಿತ್ಯದ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದರು. ಹರ್ಡೇಕರ್ ಮಂಜಪ್ಪನವರು ಆಶ್ರಮದಿಂದ ಪ್ರಕಟಿಸುತ್ತಿದ್ದ





ರಾಷ್ಟ್ರಪತಿ ಜತ್ತಿ ಅವರೊಡನೆ ಪುರಾಣಿಕರು

'ಶರಣ ಸಂದೇಶ' ಎಂಬ ವಾರಪತ್ರಿಕೆಗೆ ಏನಾದರೊಂದು ಕವಿತೆಯನ್ನೊ ಕತೆಯನ್ನೊ ಬರೆಯತೊಡಗಿದರು. ಪುರಾಣಿಕರು ತಮಗೆ "ಕಾವ್ಯಾನಂದ" ಎಂಬ ಕಾವ್ಯನಾಮ ಇಟ್ಟುಕೊಳ್ಳಲು ಈ ಆಶ್ರಮದ ಪತ್ರಿಕೆಯೇ ಕಾರಣ. ಒಮ್ಮೆ 'ಶರಣ ಸಂದೇಶ' ಪತ್ರಿಕೆಗೆ 'ಕಾವ್ಯದೇವಿ' ಎಂಬ ಕವಿತೆಯನ್ನು ಬರೆದರು. ಆ ಕವಿತೆಯ ಕೊನೆಯ ಸಾಲು ಹೀಗಿದೆ :

"ನಿನ್ನಾತ್ಮವಾನಂದ, ನನ್ನಾತ್ಮ ಕಾವ್ಯ;
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ."

ಈ ಕವಿತೆಯನ್ನು ಓದಿದ ಜನರು ಸಂತೋಷಪಟ್ಟು "ಯಾರು ಈ ಕಾವ್ಯಾನಂದ?" ಎಂಬುದಾಗಿ ಕೇಳತೊಡಗಿದರು. ಅಂದಿನಿಂದ ಪುರಾಣಿಕರು 'ಕಾವ್ಯಾನಂದ'ರೇ ಆದರು. ಇದೇ ಸಂದರ್ಭದಲ್ಲಿ ಹರ್ಡೇಕರ್ ಮಂಜಪ್ಪನವರು ಮುಪ್ಪಿನ ಷಡಕ್ಷರಿಯವರ 'ಸುಬೋಧ ಸಾರ' ಎಂಬ ಕೃತಿಯನ್ನು ಸಂಪಾದಿಸಿದರು. ಈ ಕೃತಿಗೆ ಪುರಾಣಿಕರಿಂದಲೇ ಮುನ್ನುಡಿಯನ್ನು ಬರೆಸಿದರು. ಇದರಿಂದ ಪುರಾಣಿಕರ ಕೀರ್ತಿ ಇನ್ನೂ ಹೆಚ್ಚಿತು.

ಹೈದರಾಬಾದಿನಲ್ಲಿ ಪದವಿ ಪರೀಕ್ಷೆ ಓದುವಾಗ ಪುರಾಣಿಕರಿಗೆ ನಾಟಕದ ಹುಚ್ಚು ಹಿಡಿಯಿತು. ಅಲ್ಲಿ ಇದ್ದವರೆಲ್ಲಾ ಹಳೆಯ ಸ್ನೇಹಿತರಾದುದರಿಂದ ನಾಟಕವೊಂದನ್ನು ಆಡಲು ಯೋಚಿಸಿದರು. ಆಗ ಪುರಾಣಿಕರೇ 'ಆತ್ಮಾರ್ಪಣ' ಎಂಬ ನಾಟಕವೊಂದನ್ನು ಬರೆದು ಅದರಲ್ಲಿ ಬಸವಣ್ಣನವರ ಪಾತ್ರವನ್ನು ವಹಿಸಿದರು. ನಾಟಕ ತುಂಬಾ ಯಶಸ್ವಿಯಾಯಿತು. ಎಲ್ಲರೂ ಹೊಗಳಿದರು. 'ವೈನತಾಯಿ ಖೇಣಿ' ಎಂಬುವವರು ಪುರಾಣಿಕರಿಗೆ ಸುವರ್ಣ ಪದಕವನ್ನು ನೀಡಿ ಗೌರವಿಸಿದರು. ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕವಿಸಮ್ಮೇಳನ ನಡೆದಾಗ ಮೊದಲ ಬಾರಿಗೆ ಪುರಾಣಿಕರಿಗೆ ಭಾಗವಹಿಸಲು ಅವಕಾಶ ಸಿಕ್ಕಿತು. 'ಎರಡು ಚಿತ್ರಗಳು, ಮನ್ನಿಸೆನ್ನನು ಚೆನ್ನೆ' ಎಂಬ ಎರಡು ಕವನಗಳನ್ನು ಓದಿದರು. ಕವನಗಳನ್ನು ಕೇಳಿದ ಬೇಂದ್ರೆ, ಗೋಕಾಕ್ ಮುಂತಾದವರು ಪುರಾಣಿಕರ ಬೆನ್ನು ತಟ್ಟಿದರು. ಮಾಸ್ತಿಯವರು ಪುರಾಣಿಕರನ್ನು ಹತ್ತಿರ ಕರೆದು 'ನೀನು ತುಂಬಾ ಚೆನ್ನಾಗಿ ಬರೆಯುತ್ತೀಯಪ್ಪ, ಬರೆಯುವುದನ್ನು ಬಿಡಬೇಡ, ಮುಂದೆ ಒಳ್ಳೆಯ ಕವಿಯಾಗುವೆ' ಎಂಬುದಾಗಿ ಹರಸಿದರು. ಮಾಸ್ತಿಯವರಂತಹ ಶ್ರೇಷ್ಠ ಸಾಹಿತಿಗಳ ಅಸೀಮ ವಾತ್ಸಲ್ಯ ಉದ್ದಕ್ಕೂ ನನ್ನ ಬೆಳವಣಿಗೆಗೆ ಬಲವಾದ ಪ್ರೇರಣೆ, ಪ್ರಚೋದನೆಗಳನ್ನು ನೀಡಿದೆ' ಎನ್ನುತ್ತಾರೆ ಪುರಾಣಿಕರು.

ಪುರಾಣಿಕರಿಗೆ ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ. ಮಕ್ಕಳ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ. ಕೆಲವು ಶಾಲೆಗಳ ಸಮಾರಂಭಗಳಿಗೆ ಪುರಾಣಿಕರು ಭಾಗವಹಿಸಲು

ಹೋದಾಗ ಅಲ್ಲಿನ ಗುರುಗಳು ಇವರನ್ನು ಪರಿಚಯಮಾಡಿ ಕೊಡುವ ಸಂದರ್ಭದಲ್ಲಿ 'ಅಜ್ಜನ ಕೋಲಿದು ನನ್ನಯ ಕುದುರೆ, ಕರಡಿ ಕುಣಿತ' ಎಂಬ ಪದ್ಯಗಳನ್ನು ಬರೆದವರು ಇವರೇ ಎಂದಾಗ ಮಕ್ಕಳು ಬೆರಗುಗಣ್ಣಿನಿಂದ ನೋಡಿ ಚಪ್ಪಾಳೆ ತಟ್ಟುತಿದ್ದರು. ಪುರಾಣಿಕರಿಗೆ ಮಕ್ಕಳ ಪದ್ಯಗಳನ್ನು ಬರೆಯಲು ಆಸಕ್ತಿ ಕೆರಳಿಸಿದವರು ಶ್ರೀ ಡಿ. ಕೆ. ಭೀಮ ಸೇನರಾಯರು ಹಾಗೂ ಶ್ರೀಮಾನ್ವಿ ನರಸಿಂಗರಾಯರು.

ಪುರಾಣಿಕರು ಬರೆದಿರುವ ಮಕ್ಕಳ ಕವನ ಸಂಕಲನ ಗಳಲ್ಲಿ 'ತುಪ್ಪಾರೊಟ್ಟಿಗೇ ಗೇ ಗೇ, ಗಿಲ್ ಗಿಲ್ ಗಿಲಗಚ್ಚಿ, ತಿರುಗಲೆ ತಿರುಗುಯ್ಯಾಲೆ' ಎಂಬುವು ತುಂಬಾ ಜನಪ್ರಿಯ ವಾಗಿವೆ. ಈ ಕವನಗಳಲ್ಲಿ ಬರುವ 'ಚಂದ್ರಲೋಕದೊಳಿನ್ನು ಮನೆಯ ಕಟ್ಟುವರಂತೆ, ನಂಜನಗೂಡಿನ ರಸಬಾಳೆ, ಬಣ್ಣದ ಗರಿಯಿದು ಮಣ್ಣೊಳು ದೊರೆಯಿತು' ಎಂಬ ಕವಿತೆಗಳು ಮಕ್ಕಳ ಮೇಲೆ ಹೆಚ್ಚು ಪ್ರಭಾವ ಬೀರುವುದರ ಜೊತೆಗೆ ದೊಡ್ಡವರು ಸಹ ನಾಲಿಗೆ ಚಪ್ಪರಿಸುವಂತೆ ಇವೆ. ಉಳಿದ ಕವನ ಸಂಕಲನಗಳಲ್ಲಿ 'ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು' ಮುಂತಾ ದವು ಓದುಗರಲ್ಲಿ ಹೆಚ್ಚು ಆಸಕ್ತಿ ಕೆರಳಿಸಿವೆ.

'ಮೊದಲು ಮಾನವನಾಗು' ಎಂಬ ಕವನ ಸಂಕಲನ ದಲ್ಲಿ



'ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು,
ಶೂದ್ರ ವೈಶ್ಯನೆ ಆಗು ದುಡಿದು ಗಳಿಸಿ,
ಏನಾದರು ಆಗು ನಿನ್ನೊಲವಿನಂತಾಗು
ಏನಾದರು ಸರಿಯೇ....ಮೊದಲು ಮಾನವನಾಗು'

ಎಂಬುದಾಗಿ ಪುರಾಣಿಕರು ಮಾನವತೆಯ ಬಗ್ಗೆ ಸಾರಿ ಹೇಳಿದ್ದಾರೆ.

ಕನ್ನಡ ಭಾಷೆಯಲ್ಲದೆ ಫಾರ್ಸಿ, ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿರುವ ಪುರಾಣಿಕರು ಬೇರೆ ಭಾಷೆಗಳ ಹೆಸರಾಂತ ಕವಿಗಳ ಬಗ್ಗೆ ಜೀವನ ಚರಿತ್ರೆ ಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದುವು 'ನಜೀರ ಅಕಬರಾಬಾದಿ, ಮಿರ್ಜಾ ಗಾಲಿಬ್.' ಅಷ್ಟೇ ಅಲ್ಲದೆ 'ಸಿದ್ಧರಾಮ, ಹರ್ಡೇಕರ್ ಮಂಜಪ್ಪ' ಮುಂತಾದ ಉನ್ನತ ವ್ಯಕ್ತಿಗಳ ಬಗ್ಗೆಯೂ ಜೀವನಚರಿತ್ರೆಯನ್ನು ಬರೆದಿದ್ದಾರೆ.

ಇವರು ಬರೆದಿರುವ ನಾಟಕಗಳಲ್ಲಿ 'ಆತ್ಮಾರ್ಪಣ, ಭಾರತವೀರ, ರಜತರೇಖೆ, ನಿರ್ಬಂಧನ' ಮುಂತಾದವು ರಂಗದ ಮೇಲೆ ತುಂಬಾ ಯಶಸ್ವಿಯಾಗಿವೆ.

ಪುರಾಣಿಕರು 'ತ್ರಿಭುವನ ಮಲ್ಲ' ಎಂಬ ಒಂದೇ ಒಂದು ಐತಿಹಾಸಿಕ ಕಾದಂಬರಿಯನ್ನು ಸಹ ಬರೆದಿದ್ದಾರೆ.

## ವಚನೋದ್ಯಾನ

ಶರಣ ಸಾಹಿತ್ಯದ ಬಗ್ಗೆ ಎಸ್.ವಿ. ರಂಗಣ್ಣ, ಡಿವಿಜಿ, ಪರಮೇಶ್ವರಭಟ್ಟರಂತೆ ಪುರಾಣಿಕರು ಸಹ ಚಿಕ್ಕ ವಯಸ್ಸಿನಿಂದಲೂ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಫಲ "ವಚನೋದ್ಯಾನ" ಕೃತಿ. ವಚನಸಾಹಿತ್ಯದಲ್ಲಿ ಇದೊಂದು ಮಹತ್ವದ ಗ್ರಂಥವಾಗಿದೆ. ಪುರಾಣಿಕರು ತಮ್ಮ ಜೀವನದ ಎಲ್ಲಾ ಅನುಭವಗಳನ್ನು ಈ ಶ್ರೇಷ್ಠ ಕೃತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಇದರಲ್ಲಿ ಒಟ್ಟು ೩೦೫ ವಚನಗಳಿವೆ.

"ನನಗೆ ತೋರಿದಂತೆ ಬರೆದರೆ ಅದು ರಚನೆ. ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ" ಎಂಬುದಾಗಿ ತಮ್ಮ ವಚನದ ಬಗ್ಗೆ ಹೇಳಿಕೊಂಡಿರುವ ಪುರಾಣಿಕರು ಇಲ್ಲಿನ ವಚನಗಳನ್ನು "ಸ್ವತಂತ್ರ ಧೀರ ಸಿದ್ಧೇಶ್ವರ" ಎಂಬ ಅಂಕಿತದಲ್ಲಿ ಬರೆದಿದ್ದಾರೆ. "ಸ್ವತಂತ್ರ ಪ್ರವೃತ್ತಿ, ಮತ್ತು ಧೀರಗುಣಗಳು ನಮ್ಮ ಬದುಕಿನ ಸೂತ್ರಗಳಾಗಿರುವುದರಿಂದ ಸ್ವತಂತ್ರ ಧೀರ ಸಿದ್ಧೇಶ್ವರ ಎಂಬ ಅಂಕಿತ ನಮ್ಮ ಕಾಲದ ಮಹಾಲಕ್ಷಣವನ್ನು ಸೂಚಿಸುತ್ತದೆ" — ಎಂಬುದಾಗಿ ಡಾ|| ಹಾ. ಮಾ. ನಾಯಕರು ವಚನೋದ್ಯಾನದ ಮುನ್ನುಡಿಯಲ್ಲಿ ಈ ಅಂಕಿತದ ಬಗ್ಗೆ ವಿವರಣೆ ನೀಡಿದ್ದಾರೆ.

ಬುದ್ಧಿ ಜೀವಿಯಾಗಿರುವಂತೆ ಭಾವನಾಶೀಲರೂ ಆಗಿರುವ ಪುರಾಣಿಕರು "ನಾಗರೀಕತೆಯ ಸೋಗಿನಲ್ಲಿ



ನಮ್ಮ ಸಮಾಜ, ಮಾನವ ಸಹಜವಾದ ಸದ್ಭಾವನೆಗಳನ್ನು ಕಳೆದುಕೊಂಡಿದೆ" ಎಂಬುದನ್ನು ಕೆಳಗಿನ ಒಂದು ವಚನದಲ್ಲಿ ಹೇಳಿದ್ದಾರೆ.

ವಿದ್ಯೆ ಬಂತು, ವಿನಯ ಹೋಯ್ತು
ಬುದ್ಧಿ ಬಂತು, ಶ್ರದ್ಧೆ ಹೋಯ್ತು
....................................
ಮಾತು ಬಂತು, ಕೃತಿ ಹೋಯ್ತು
ಜಾತಿ ಬಂತು, ಪ್ರೀತಿ ಹೋಯ್ತು
ಸ್ವತಂತ್ರ ಬಂತು, ಸೌಜನ್ಯ ಹೋಯ್ತು
ಸಿದ್ಧಯ್ಯಪುರಾಣಿಕ ಬಂದ, ಸ್ವತಂತ್ರಧೀರ
ಸಿದ್ಧೇಶ್ವರ ಹೋದ"

ವಚನೋದ್ಯಾನದ ಬಗ್ಗೆ ಕೆಲವು ವಿದ್ವಾಂಸರು "ಈ ವಚನ ಕುಸುಮಾಂಜಲಿಯು ವಿಶ್ವಕವಿ ರವೀಂದ್ರರ ಗೀತಾಂಜಲಿಯನ್ನು ನೆನಪಿಗೆ ತರುತ್ತದೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಕನ್ನಡದಲ್ಲಿ ಪ್ರಥಮ ಭಿಲ್ವಾರ ಪ್ರಶಸ್ತಿ ಪಡೆದ ಭಾಗ್ಯ ವಚನೋದ್ಯಾನಕ್ಕೆ ಸಂದಿದೆ.

ಕಾವ್ಯಾನಂದರ ಮತ್ತೊಂದು ಪ್ರಕಟವಾಗದ ಕೃತಿ "ಮರುಳಸಿದ್ಧನ ಕಂತೆ." ಈ ಕೃತಿಯಲ್ಲಿ "ಸುಳ್ಳು ಬದುಕಿದೆ; ನಿಜದ ಸೋಗು ಹಾಕಿ—ಮರುಳಸಿದ್ಧ" ಮುಂತಾದ ನೀತಿ ವಚನಗಳಿವೆ. 'ಮರುಳಸಿದ್ಧ' ಎಂಬುದು ಇಲ್ಲಿನ

ಇಲ್ಲಿನ ಅಂಕಿತವಾಗಿದೆ. ಈ ಕೃತಿಯು ಸಹ 'ಮಂಕುತಿಮ್ಮನ ಕಗ್ಗ, ರಂಗ ಬಿನ್ನಪ' ಮುಂತಾದ ಮಹತ್ವದ ಕೃತಿಗಳ ಸಾಲಿಗೆ ಸೇರುವಂತಹುದು. ಇದು ಪ್ರಕಟವಾದರೆ ಕನ್ನಡಮ್ಮನ ಕಂಠಾಭರಣಕ್ಕೆ ಮತ್ತೊಂದು ಕೃತಿರತ್ನ ಸೇರುತ್ತದೆ. 'ಚರಗ' ಎಂಬ ಕವನಸಂಲಕನವೊಂದು ಈಗಾಗಲೇ ಪ್ರಕಟಣೆಗೆ ಸಿದ್ಧವಾಗಿದೆ.

..........................................

## ಪ್ರಶಸ್ತಿ–ಸನ್ಮಾನ

ಪುರಾಣಿಕರು ಕನ್ನಡಮ್ಮನಿಗೆ ಸರಕಾರಿ ಸೇವೆಯ ಜೊತೆಗೆ ಸಾಹಿತ್ಯ ಸೇವೆಯನ್ನು ಮಾಡಿರುವುದರ ಮೂಲಕ ಎರಡು ರೀತಿಯಲ್ಲಿ ಪೂಜೆ ಮಾಡಿದ್ದಾರೆ. ಇಂತಹ ಶ್ರೇಷ್ಠ ಕವಿಗಳ ಸೇವೆಯನ್ನು ಗುರ್ತಿಸಿ ಅನೇಕ ಸಂಘ ಸಂಸ್ಥೆಗಳು ಪುರಾಣಿಕರನ್ನು ಸನ್ಮಾನಿಸಿ ಪ್ರಶಸ್ತಿ ಪತ್ರ ನೀಡಿವೆ. ಬೆಳಗಾವಿ ಮಿತ್ರರು ಪುರಾಣಿಕರ ಌಱನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ 'ಕಾವ್ಯಾನಂದ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸುವುದರ ಮೂಲಕ ಗೌರವ ತೋರಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಪುರಾಣಿಕರ ಬಹುಮುಖ ಸೇವೆಯನ್ನು ಮೆಚ್ಚಿ 'ಗೌರವ ಡಾಕ್ಟರೇಟ್ ಪದವಿ' ನೀಡುವುದರ ಮೂಲಕ ಸನ್ಮಾನಿಸಿದ್ದಾರೆ.

ಪುರಾಣಿಕರ ಅನೇಕ ಕೃತಿಗಳಿಗೆ ಬಹುಮಾನ, ಪ್ರಶಸ್ತಿಗಳು ಲಭಿಸಿವೆ. 'ತುಪ್ಪಾರೊಟ್ಟಿ ಗೇ ಗೇ ಗೇ' ಎಂಬ





ಭಿಲ್ವಾರ ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ಪುರಾಣಿಕರು

ಮಕ್ಕಳ ಕೃತಿಗೆ ಭಾರತ ಸರ್ಕಾರದ ಬಹುಮಾನ ದೊರೆತಿದೆ. 'ಮಾನಸ ಸರೋವರ' ಎಂಬ ಕೃತಿಗೆ ರಾಜ್ಯ ಸರಕಾರದ ಬಹುಮಾನ ಲಭಿಸಿದೆ. ಇವರ 'ವಚನೋದ್ಯಾನ'ವು ಭಾರತೀಯ ಭಾಷಾ ಪರಿಷತ್ತಿನ ಪ್ರಥಮ ಭಿಲ್ವಾರ ಪ್ರಶಸ್ತಿ ಪಡೆದ ಕನ್ನಡ ಕೃತಿಯಾಗಿದೆ. ಈ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಮಾಳವಾಡ ಪ್ರಶಸ್ತಿಯೂ ಸಹ ಸಂದಿವೆ. ಇದು ಹಿಂದಿ ಹಾಗೂ ಮರಾಠಿ ಭಾಷೆಗಳಿಗೆ ಅನುವಾದ ನಡೆದಿದೆ.

ದಸರಾ ಕವಿ ಸಮ್ಮೇಳನ, ಜಿಲ್ಲಾ ಸಾಹಿತ್ಯಸಮ್ಮೇಳನ, ಧರ್ಮ ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿದ್ದ ಭಾಗ್ಯ ಪುರಾಣಿಕರದಾಗಿದೆ. ೧೯೮೩ರ ರಾಜ್ಯೋತ್ಸವ ಪ್ರಶಸ್ತಿಯು ಇವರಿಗೆ ಸಂದಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಕನ್ನಡನಾಡಿನ ಜನತೆ ಪುರಾಣಿಕರನ್ನು 'ಐವತ್ತನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ' ಆಯ್ಕೆ ಮಾಡುವುದರ ಮೂಲಕ ಅತ್ಯುನ್ನತ ಗೌರವ ಸಲ್ಲಿಸಿದೆ.

ಪ್ರಾರಂಭದಿಂದಲೂ ಅನೇಕ ಸಂಘ ಸಂಸ್ಥೆಗಳಲ್ಲಿ ದುಡಿದ ಪುರಾಣಿಕರು ಇಂದಿಗೂ ಸಹ 'ಬಸವ ಪಥ' ಎಂಬ ಪತ್ರಿಕೆಯ ಸಂಪಾದಕರಾಗಿದ್ದಾರೆ. 'ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟಿನ' ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಹೀಗೆ ಸಂತೃಪ್ತ ಜೀವನ ನಡೆಸಿರುವ ಪುರಾಣಿಕರು ತಮ್ಮ ಇಳಿವಯಸ್ಸಿನಲ್ಲಿ 'ಹೃದಯ ಹಳ್ಳಿಯಲ್ಲಿದ್ದರೂ ದೇಹ ಮಹಾನಗರಿಯಲ್ಲಿದೆ. ಆದಷ್ಟು ಹಿರಿಯ ಸಾಹಿತಿಗಳ, ಕವಿಗಳ ಸಂಗದಲ್ಲಿ ಕಾಲ ಕಳೆಯುವ ಬಯಕೆ ನನಗೆ' ಎಂಬುದಾಗಿ ತಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡನಾಡು ನುಡಿಗೆ ಉತ್ಸಾಹ ಚಿಲುಮೆಯಾಗಿ ದುಡಿದು, ದುಡಿಯುತ್ತಿರುವ ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದದಿಂದ ನೂರು ವರ್ಷ ಬಾಳಲಿ, ಅವರಿಂದ ಇನ್ನು ಮುತ್ತಿನಂತಹ ಕೃತಿ ರತ್ನಗಳು ಹೊರ ಬರಲಿ, ಅವರ ಸಾಹಿತ್ಯದ ಸುವಾಸನೆ ಎಲ್ಲೆಡೆ ಸೂಸಲಿ' ಎಂಬುದಾಗಿ ನಾವೆಲ್ಲ ಅವರಿಗೆ ಶುಭ ಕೋರೋಣ.

॥ ಸಿರಿಗನ್ನಡಂ ಗೆಲ್ಗೆ ॥

## ಪುರಾಣಿಕರ ಬಾಳಿನ ಹಾದಿಯಲ್ಲಿ

| | |
|---|---|
| 18-6-1918 | ಜನನ, ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ |
| 1943 | ವಿವಾಹ |
| 1944 | ಭೂ ಉಲ್ಲೇಖನಾ ಅಧಿಕಾರಿ, ನಾಂದೇಡ |
| 1945 | ಭೂ ಉಲ್ಲೇಖನಾ ಅಧಿಕಾರಿ, ಗುಲ್ಬರ್ಗ |
| 1948 | ಅಸಿಸ್ಟೆಂಟ್ ಕಮಿಷನರ್, ಜಾಗೀರಾತ್ |
| 1951 | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| 1952 | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| 1953 | ಕೃಷಿಯೋಜನೆ ಮತ್ತು ಪೂರೈಕೆ ಇಲಾಖೆ ಸಚಿವರ ಕಾರ್ಯದರ್ಶಿ |
| 1955 | ಡೆಪ್ಯುಟಿ ಕಲೆಕ್ಟರ್, ತಾಂಡೂರು |
| 1957 | ಡೆಪ್ಯುಟಿ ಕಲೆಕ್ಟರ್, ಯಾದಗಿರಿ |
| 1958 | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| 1960 | ವಿದ್ಯಾ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ |
| 1962 | ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು |
| 1964 | ಅರ್ಥ ಶಾಖೆಯಲ್ಲಿ ಡೆಪ್ಯುಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿಗಳು |
| 1965 | ಡೆಪ್ಯುಟಿ ಕಮಿಷನರ್, ಮಡಕೇರಿ |
| 1967 | ಸಾರಿಗೆ ಕಮಿಷನರ್, ಬೆಂಗಳೂರು |
| 1970 | ಡೆಪ್ಯುಟಿ ಕಮಿಷನರ್, ಬೆಳಗಾವಿ |
| 1972 | ಕಾರ್ಮಿಕ ಕಮಿಷನರ್, ಬೆಂಗಳೂರು |
| 1976 | ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ |
| 1976 | ಸರ್ಕಾರಿ ಸೇವೆಯಿಂದ ನಿವೃತ್ತಿ |
| 1978 | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 1980 | ಭಿಲ್ವಾರ ಪ್ರಶಸ್ತಿ |
| 1981 | ಮಾಳವಾಡ ಪ್ರಶಸ್ತಿ |
| 1983 | ರಾಜ್ಯೋತ್ಸವ ಪ್ರಶಸ್ತಿ |
| 1987 | 58ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು |

## ಡಾ. ಪುರಾಣಿಕರ ಸಾಹಿತ್ಯ ಸಂಪದ

| ಸಂಪಾದಿತ ಕೃತಿಗಳು | ಮೊದಲ ಪ್ರಕಟಣೆ |
|---|---|
| ಸಂಬೋಧಸಾರ | 1939 |
| ಶ್ರೀಕಾರ ಹಾಗೂ ಪ್ರಬಂಧಮಾಲೆ | 1952 |
| ಪದ್ಯ ರತ್ನಾಕರ | 1956 |
| ಮಹಾತ್ಮ ಕನಕದಾಸ ಪ್ರಶಸ್ತಿ | 1965 |
| ಸರಹದ್ ಗಾಂಧಿ | 1967 |
| ಶರಣ ಪ್ರಸಾದ | 1969 |
| ಮಣಿಹ | 1985 |
| ಸಿದ್ಧಗಂಗಾ ಶ್ರೀ | 1986 |
| **ಕವನ ಸಂಗ್ರಹಗಳು** | |
| ಜಲಪಾತ | 1953 |
| ಕರುಣಾ ಶ್ರಾವಣ | 1955 |
| ಮಾನಸ ಸರೋವರ | 1959 |
| ಕಲ್ಲೋಲ ಮಾಲೆ | 1968 |
| ಮೊದಲು ಮಾನವನಾಗು | 1969 |
| ಕಾವ್ಯಾನಂದರ ಆಯ್ದ ಕವನಗಳು (ವಿಶ್ವ ಕನ್ನಡ ಮೇಳಕ್ಕಾಗಿ ಸರಕಾರದ ಪ್ರಕಟಣೆ) | |
| ಚರಗ | |
| **ಮಕ್ಕಳ ಪದ್ಯ ಸಂಗ್ರಹಗಳು** | |
| ತುಪ್ಪಾರೊಟ್ಟಿ ಗೇ ಗೇ ಗೇ | 1973 |
| ಗಿಲ್ ಗಿಲ್ ಗಿಲಗಚ್ಚಿ | 1978 |
| ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ | |
| ನ್ಯಾಯ ನಿರ್ಣಯ (ನಾಟಕ) | |
| **ವಚನ ಸಂಗ್ರಹಗಳು** | |
| ವಚನೋದ್ಯಾನ | 1977 |
| ವಚನ ನಂದನ | 1983 |
| **ನಾಟಕಗಳು** | |
| ಆತ್ಮಾರ್ಪಣೆ | 1942 |
| ಭಾರತವೀರ | 1963 |

| | |
|---|---|
| ರಜತರೇಖೆ | 1965 |
| ನಿರ್ಬಂಧನ | 1974 |
| ಭಗ್ನ ನೂಪುರ | |

**ಕಾದಂಬರಿ**

| | |
|---|---|
| ತ್ರಿಭುವನ ಮಲ್ಲ | 1974 |

**ಕಥಾಸಂಗ್ರಹಗಳು**

| | |
|---|---|
| ಕಥಾಮಂಜರಿ | 1949 |
| ತುಷಾರ ಹಾರ | 1956 |

**ಜೀವನ ಚರಿತ್ರೆಗಳು**

| | |
|---|---|
| ಶರಣ ಚರಿತಾಮೃತ | 1964 |
| ಬಸವಣ್ಣನವರ ಜೀವನ ಹಾಗೂ ಸಂದೇಶ | 1977 |
| ಮಹಾದೇವಿ | |
| ಸಿದ್ಧರಾಮ | 1974 |
| ಹರ್ಡೇಕರ್ ಮಂಜಪ್ಪ | 1978 |
| ಮಿರ್ಜಾಗಾಲಿಬ್ | 1979 |

ಇತರೆ
ಗ್ರಾಮಸ್ವರಾಜ್ಯ
ನಜೀರ್ ಅಕಬರಾಬಾದಿ (ಅನುವಾದ)
ಇವಲ್ಲದೆ ಅನೇಕ ರೇಡಿಯೋ ನಾಟಕಗಳು
ಹಾಗೂ ಲೇಖನಗಳು

**ಅಭಿನಂದನ ಗ್ರಂಥಗಳು**

ಕಾವ್ಯಾನಂದ (ಬೆಳಗಾವಿ)
ಕಾವ್ಯಾನಂದ (ಬೆಂಗಳೂರು)
ಸಹೃದಯ (ಬೆಂಗಳೂರು)
ಕರ್ಮಯೋಗಿ (ಬೆಳಗಾವಿ)
ಕಾವ್ಯಶ್ರೀ (ವಿಜಾಪುರ)
"ಜೀವನ ವಿಕಾಸ"ದ ವಿಶೇಷ ಸಂಚಿಕೆ (ಗುಲ್ಬರ್ಗಾ)
ವಚನೋದ್ಯಾನ ದರ್ಶನ